# ಮಹಿಳಾ ವಿಶೇಷ

MAHILA VISHESHA

**ಕನ್ನಡ ತಿಂಗಳ ಪತ್ರಿಕೆ** **ನವೆಂಬರ್ 1-30 2017**

KANNADA MONTHLY NOVEMBER 1-30 2017

ಸಂಪುಟ 3, ಸಂಚಿಕೆ 3 ಪುಟ : 24, ಬೆಲೆ : ರೂ. 10–00

Vol. 3, Issue 3, Pages: 24, Price : Rs. 10-00


ಸಂಪಾದಕರು: **ಹೆಚ್.ವಿ. ವೆಂಕಟಸುಬ್ಬರಾವ್** ಮೊಬೈಲ್ 88803–34444



## ಒಳಪುಟಗಳಲ್ಲಿ...


ನಾವೇಕೆ ವಂದಿಸುತ್ತೇವೆ? **Pg. No. 4**

ಕನ್ನಡ ರಾಜ್ಯೋತ್ಸವ ಮತ್ತು ಮಹಿಳೆ **Pg. No. 6**

ಇರುವೆ **Pg. No. 8**

ತುಂಬೆ ಹೂವು **Pg. No. 14**

ಬಿಲ್ವ ಮಹಾತ್ಮೆ **Pg. No. 18**


**ನಾಡಿನ ಜನತೆಗೆ ಕನ್ನಡ ರಾಜ್ಯೋತ್ಸವ, ಗುರುನಾನಕ ಜಯಂತಿ, ಕನಕದಾಸ ಜಯಂತಿ, ಸಾರಿಗೆ ದಿನಾಚರಣೆ, ಮಕ್ಕಳ ದಿನಾಚರಣೆ, ಧನ್ವಂತರಿ ಜಯಂತಿ ಹಾಗೂ ಶ್ರೀ ಗೀತಾ ಜಯಂತಿ ಪ್ರಯುಕ್ತ ಶುಭಾಶಯಗಳು**





## 21 ಪತ್ರೆಗಳ ಮಾಹಿತಿ



ಗಣೇಶ ಚತುರ್ಥಿಯ ಶುಭಾಶಯಗಳು. ಗಣೇಶನ ಪೂಜೆಯನ್ನು ಮಾಡುವಾಗ ಅರ್ಚನೆಯಲ್ಲಿ 21 ಬಗೆಯ ಪತ್ರೆ ಅಥವಾ ಎಲೆಗಳ ವಿಧ್ಯುಕ್ತ ಪಾತ್ರವಿದೆ. ಇವು ಔಷಧೀಯ ಗುಣಗಳಿಂದಲೂ ಕೂಡಿದ್ದು, ಆಯುರ್ವೇದದಂಥ ಪ್ರಾಚೀನ ವೈದ್ಯಪದ್ಧತಿಯಲ್ಲಿ ಇಂದಿಗೂ ಪರಿಣಾಮಕಾರಿಯಾಗಿ ಬಳಕೆಯಾಗುತ್ತಿವೆ. ವೇದ–ಪುರಾಣ–ಜಾನಪದ ಕಥನ ರಾಶಿಯಲ್ಲಿ ಇವುಗಳ ಉಲ್ಲೇಖಗಳು ಹೇರಳವಾಗಿವೆ. ಒಂದೊಂದೇ ಪತ್ರೆಗಳ ಮಾಹಿತಿಯನ್ನು ನೀಡುವುದೇ ನಮ್ಮ ಉದ್ದೇಶವಾಗಿದೆ.

## 4. ಬದರಿ (ಎಲಚಿ)

ಸಂಸ್ಕೃತ : ಬದರೀ

ಇಂಗ್ಲೀಷ್: ಚೈನೀಸ್ ಡೇಟ್

ಎಲಚಿ, ಬುದುರಿ, ಬೋರೆ ಅಥವಾ ಬಾರೆ ಹಣ್ಣು ಕರ್ನಾಟಕದ ಎಲ್ಲ ಭಾಗಗಳಲ್ಲೂ ಬೆಳೆಯುತ್ತದೆ. ಭಾರತೀಯ ಜನಪದ ಸಾಹಿತ್ಯದಲ್ಲಿಯೂ ಪ್ರಾಧಾನ್ಯ ಪಡೆದಿರುವ ಎಲಚಿಯ ಕೃಷಿ ಆರಂಭವಾದುದು ಅಹ್ಮದ್‌ನಗರದ ದೊರೆಯಾಗಿದ್ದ ಎರಡನೆಯ ರಾಗೋಜಿ ಭೋಂಸ್ಲೆಯ ಕಾಲದಲ್ಲಿ. ಈ ದೊರೆ ಕೆಲವು ಅರೇಬಿಯಾದ ಗುತ್ತಿಗೆದಾರರಿಗೆ ಭೂಮಿಯನ್ನು ಇನಾಮು ನೀಡಿದ್ದಕ್ಕೆ ಪ್ರತಿಯಾಗಿ ಅವರು ಈ ರಾಜನಿಗೆ ಒಂದಿಷ್ಟು ಮಿಶ್ರತಳಿಯ ಎಲಚಿ ಹಣ್ಣನ್ನು ಉಡುಗೊರೆಯಾಗಿ ನೀಡಿದರು. ಪವಿತ್ರ ಯಾತ್ರಾಸ್ಥಳವಾದ ಬದರೀನಾಥಕ್ಕೆ ಈ ಹೆಸರು ಬರಲು ಕಾರಣವೇ ನರನಾರಾಯಣನ ಆಶ್ರಮದ ಬಳಿ ಇರುವ ಬದರೀವನ ಅಥವಾ ಎಲಚೀ ತೋಟ ಎನ್ನಲಾಗುತ್ತದೆ.

**ಉಪಯುಕ್ತ ಗುಣಗಳು:** ಎಲಚಿ ಹಣ್ಣು ಪೋಷಕಾಂಶಗಳ ಆಗರ. ಸೇಬಿಗಿಂತಲೂ ಹೆಚ್ಚು ಪೋಷಕಾಂಶಗಳನ್ನು ಹೊಂದಿದೆ. ಬೇರು, ಎಲೆ, ಕಾಂಡದ ತೊಗಟೆ, ಹಣ್ಣು, ಬೀಜ, ಬೀಜದ ತಿರುಳು ಎಲ್ಲವೂ ಔಷಧೀಯ ಗುಣ ಹೊಂದಿದೆ.

### ಔಷಧೀಯ ಗುಣಗಳು

ವಾಂತಿಯಾಗುತ್ತಿದ್ದರೆ ಎಲಚಿ ಹಣ್ಣು, ಕಾಳುಮೆಣಸು ಸೇರಿಸಿ ಕಷಾಯ ತಯಾರಿಸಿ, ಕಲ್ಲುಸಕ್ಕರೆ ಬೆರೆಸಿ ಕುಡಿಯಿರಿ.

ನರಗಳ ದೌರ್ಬಲ್ಯವಿರುವವರಿಗೆ ಎಲಚಿ ಹಣ್ಣು ಉತ್ತಮ.

ತಲೆಗೂದಲು ಉದುರುತ್ತಿದ್ದಲ್ಲಿ ಎಲಚಿ ಎಲೆಗಳ ರಸವನ್ನು ಹಚ್ಚಿಕೊಂಡು ತಲೆ ತೊಳೆದುಕೊಳ್ಳಿ.

(ಸಂಗ್ರಹ: ಶ್ರೀ ಸುಬ್ಬರಾಯ ಶರ್ಮ)

## ನನ್ನ ಮಾತು
## ಎಚ್ಚರ



ಕರ್ನಾಟಕದಲ್ಲಿ ವಿಧಾನಸಭಾ ಚುನಾವಣೆ ಇನ್ನು ಆರು ತಿಂಗಳಲ್ಲಿ ನಡೆಯಲಿದ್ದು, ಅದಕ್ಕೆ ರಾಜಕೀಯ ಪಕ್ಷಗಳು ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿವೆ. ಅಲ್ಲದೆ ಹೊಸದಾಗಿ ನೂತನ ಪಕ್ಷಗಳು ಸಹ ಹುಟ್ಟಿ ಕೊಂಡಿರುತ್ತವೆ. ಈಗಿನಿಂದಲೇ ಎಲ್ಲರೂ ಎಚ್ಚರಿಕೆಯಿಂದಿರಬೇಕು. ಇಲ್ಲವಾದರೆ ಊಹೆಗೂ ಮೀರಿದ ಫಲಿತಾಂಶ ಬರಲಿದೆ.

ಜನಪ್ರತಿನಿಧಿಗಳು/ನಾಯಕರು ಕೈ ಬಾಯಿಯನ್ನು ಶುದ್ಧವಾಗಿಟ್ಟುಕೊಳ್ಳಬೇಕು. ಬಾಯಿಂದ ಬರುವ ಹರಿತವಾದ ಮಾತು ಗಳಿಂದ ಪ್ರಯೋಜನವಾಗುವುದಿಲ್ಲ. ಸತ್ಯ ಹೇಳುವ, ಹೇಳಿದ್ದನ್ನು ಮಾಡಿ ತೋರಿಸುವ ಯಾವಾಗಲೂ ಜನಸಾಮಾನ್ಯರ ಬಳಿಗೆ ಬರುವ ಜನನಾಯಕರು ಬೇಕು. ಕೆಸರೆರಚಾಟದ ಮಾತುಗಳು ನಾಯಕರ ವ್ಯಕ್ತಿತ್ವ ವನ್ನು ತೋರಿಸುತ್ತವೆ.

ಮತದಾರರು ಯಾವುದೇ ಆಮಿಷಗಳಿಗೆ ಒಳಗಾಗಬಾರದು. ಒಳ್ಳೆಯ ನಾಯಕನನ್ನು ಆಯ್ಕೆ ಮಾಡಿಕೊಳ್ಳಲು ಇದೊಂದು ಅವಕಾಶ. ಇಲ್ಲಿ ಎಡವಿದರೆ ನೀವೇ ಅನುಭವಿಸಬೇಕು. ಯುವಕರೇ, ಆಲೋಚಿಸಿ, ನಿಮ್ಮ ಮತ ನಿಮ್ಮ ಹಿತವನ್ನು ಕಾಪಾಡುವಂತೆ ನೋಡಿಕೊಳ್ಳಿ.

ಚುನಾವಣಾ ಆಯೋಗ ಕಟ್ಟುನಿಟ್ಟಿನ ಕ್ರಮ ಜರುಗಿಸಲೇಬೇಕು. ಹೇಳುವುದೊಂದು ಮಾಡುವುದೊಂದು ಆಗಬಾರದು. ನೀತಿ ನಿಯಮಗಳನ್ನು ಉಲ್ಲಂಘಿಸಿದವರಿಗೆ ತಕ್ಷಣ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಪರೋಕ್ಷವಾಗಿ ಮುಂದಿನ ಆಗುಹೋಗುಗಳಿಗೆ ಚುನಾವಣಾ ಆಯೋಗವೇ ನೇರ ಹೊಣೆಯಾಗುತ್ತದೆ.

ಸ್ವಚ್ಛ ಆಡಳಿತ ನಡೆಸುವವರು ಮುಂದೆ ಬನ್ನಿ. ಜನ ನಿಮ್ಮನ್ನು ಸ್ವಾಗತಿಸುತ್ತಾರೆ. ರಾಜ್ಯ, ನೀವು ನಾವು ಚೆನ್ನಾಗಿರೋಣ.

***ಸಂಪಾದಕ***
**ಹೆಚ್.ವಿ. ಸುಬ್ಬರಾವ್**
ನಿವೃತ್ತ ಸಾ.ಶಿ.ಇ. ನೌಕರ

**ಮಹಿಳಾ ವಿಶೇಷ**
MAHILA VISHESHA
**ಕನ್ನಡ ತಿಂಗಳ ಪತ್ರಿಕೆ**

**ನವೆಂಬರ್, 1-30 2017**

KANNADA MONTHLY

NOVEMBER 1-30, 2017

ಸಂಪುಟ 3, ಸಂಚಿಕೆ 3, ಪುಟ: 24

Price/ಬೆಲೆ : ರೂ. 10-00

Vol. 3, Issue 3, Pages: 24

ಮುಖಪುಟ:
**ಶ್ರೀ ಕಾಳಿ ದೇವಾಲಯ, ಕೋಲ್ಕತಾ**

ಗೌರವ ಸಂಪಾದಕರು:
**ಶ್ರೀಮತಿ ಸತ್ಯಭಾಮಾ ದಾಸ್**
**ಶ್ರೀಮತಿ ಗೀತಾ ರಾವ್**

ಸಂಪಾದಕರು:
**ಹೆಚ್.ವಿ. ವೆಂಕಟಸುಬ್ಬರಾವ್**
ಮೊಬೈಲ್ 88803-34444

ಉಪಸಂಪಾದಕರು:
**ಎಸ್.ವೆಂಕಟರವಣಪ್ಪ**
**ದ್ವಾರಕನಾಥ್ ಜಿ.**
**ಭಾಸ್ಕರ್ ಹೆಚ್.ವಿ.**

ಕಛೇರಿ ವಿಳಾಸ:
ನಂ. 1, ಸೀತಾವಿಲಾಸ ಛತ್ರ, ಎನ್.ಎಸ್. ರಸ್ತೆ, ಕೆ.ಆರ್. ಮೊಹಲ್ಲಾ,ಮೈಸೂರು-24
E-mail: mahilavishesha@yahoo.com
mahilavishesha15@gmail.com
Web: www.mahilavishesha.in





# ನಾವು ಏಕೆ ಮಾತಾಪಿತೃಗಳಿಗೆ ಮತ್ತು ಹಿರಿಯರಿಗೆ ವಂದಿಸುತ್ತೇವೆ?

ಭಾರತೀಯರು-ಮಾತಾಪಿತೃಗಳಿಗೆ, ಹಿರಿಯರಿಗೆ, ಗುರುಗಳಿಗೆ ಮತ್ತು ಸಾಧು-ಸಂತರಿಗೆ- ಅವರುಗಳ ಆದಗಳನ್ನು ಸ್ಪರ್ಶಿಸಿ ಸಾಷ್ಟಾಂಗ ಪ್ರಣಾಮಗಳನ್ನು ಸಲ್ಲಿಸುತ್ತಾರೆ. ಇದಕ್ಕೆ ಪ್ರತಿಕ್ರಿಯಿಸಿ ಹಿರಿಯರು ನಮಸ್ಕರಿಸಿದವರ ಶಿರವನ್ನು ನೇವರಿಸಿ, ಆಶೀರ್ವದಿಸುವರು. ಸಾಷ್ಟಾಂಗ ನಮಸ್ಕಾರವನ್ನು ಪ್ರತಿ ದಿವಸವೂ ಹಾಗೂ ವಿಶೇಷವಾಗಿ ಮುಖ್ಯ ಸಂದರ್ಭಗಳಲ್ಲಿ ಮಾಡಬೇಕಾಗಿರುವುದು. ಉದಾ: ಹೊಸ ಕಾರ್ಯಗಳನ್ನು ಪ್ರಾರಂಭಿಸಿದಾಗ; ಹುಟ್ಟುಹಬ್ಬದ ದಿನ; ಉತ್ಸವ ಇತ್ಯಾದಿ ದಿನಗಳಲ್ಲಿ ಗುರುಹಿರಿಯರನ್ನು ಸಂದರ್ಶಿಸಿ ಅವರಿಂದ ಆಶೀರ್ವಾದವನ್ನು ಪಡೆಯುವುದು ಭಾರತೀಯರ ಒಂದು ವಿಶಿಷ್ಟವಾದ ಸಂಸ್ಕೃತಿ. ಕೆಲವು ಪ್ರತ್ಯೇಕ ಸುಸಂಸ್ಕೃತ ಮನೆಗಳಲ್ಲಿ ನಮಸ್ಕರಿಸುವವನು-ಸಾಷ್ಟಾಂಗ ಪ್ರಣಾಮದ ಜೊತೆಗೆ, ತನ್ನ ಪ್ರವರವನ್ನೂ ಹೇಳಿಕೊಳ್ಳುತ್ತಾನೆ.

ಮನುಷ್ಯ ತನ್ನ ಪಾದದ ಮೇಲೆ ನಿಲ್ಲುತ್ತಾನೆ. ಸಾಷ್ಟಾಂಗ ಪ್ರಣಾಮದಲ್ಲಿ ಗುರುಹಿರಿಯರ ಪಾದಗಳನ್ನು ಸ್ಪರ್ಶಿಸುವುದೆಂದರೆ ಅವರುಗಳ ವಯೋಧರ್ಮ, ಬಾಳಿನ ಪರಿಪಕ್ವತೆ, ಸಭ್ಯತೆ ಮತ್ತು ದಿವ್ಯತೆಗೆ, ನಾವು ಸಲ್ಲಿಸುವ ಗೌರವದ ಸೂಚನೆ. ಗುರುಹಿರಿಯರು ನಮಗೆ ನೀಡುವ ನಿಸ್ವಾರ್ಥ ಪ್ರೇಮ ಮತ್ತು ಏಳಿಗೆಗೆ ಅವರು ಪಟ್ಟ ಶ್ರಮ ಹಾಗೂ ತ್ಯಾಗಗಳಿಗೆ ಸಾಂಕೇತಿಕವಾಗಿ ನಾವು ಸಲ್ಲಿಸುವ ಕಿಂಚಿತ್ ಗೌರವಾರ್ಪಣೆ ಈ ಸಾಷ್ಟಾಂಗ ಪ್ರಣಾಮ. ಇಂತಹ ಸಂಸ್ಕೃತಿಯ ಆಚರಣೆಯಿಂದ ಗುರುಹಿರಿಯರ ಮಹತ್ವವನ್ನು ಅರಿಯುವ



ವಿನಯವನ್ನು ನಾವು ರೂಢಿ ಮಾಡಿಕೊಳ್ಳುತ್ತೇವೆ. ಈ ಸಂಪ್ರದಾಯವು ಭಾರತದ ಜೀವಾಳವಾಗಿರುವ ಕೌಟುಂಬಿಕ ಸಂಬಂಧದ ಬಲವನ್ನು ಪ್ರತಿಬಿಂಬಿಸುತ್ತದೆ.

ಭಾರತದಲ್ಲಿ ಗುರುಹಿರಿಯರ ನೀತಿಯುಕ್ತ ಆದೇಶ ಮತ್ತು ಆಶೀರ್ವಾದಗಳಿಗೆ ಬಹಳಷ್ಟು ಬೆಲೆ ಇದೆ. ಇವುಗಳನ್ನು ಸ್ವೀಕರಿಸುವ ಸಲುವಾಗಿ ನಾವು ಅವರಿಗೆ ನಮಸ್ಕರಿಸುತ್ತೇವೆ. ನೀತಿಯುಕ್ತ ವಿಚಾರಹರಿಯು ಸಕಾರಾತ್ಮಕವಾದ ಸ್ಪಂದನವನ್ನು ಉಂಟುಮಾಡುತ್ತದೆ. ಗುರುಹಿರಿಯರ ಪ್ರೇಮಮಯ, ದಿವ್ಯಮಯ ಹಾಗೂ ಸಭ್ಯತೆಯ ಹೃದಯದಿಂದ ಚಿಮ್ಮುವ ಆದೇಶಗಳು ಅತ್ಯಂತ ಬಲಾಢ್ಯವಾಗಿರುತ್ತವೆ. ನಾವು ವಿನಯ ಮತ್ತು ಗೌರವದಿಂದ ನಮಸ್ಕರಿಸಿದಾಗ, ಅವರುಗಳ ಶುಭಾಶಯ ಹಾಗೂ ಆಶೀರ್ವಾದವು ನಮ್ಮಲ್ಲಿ ವಿಶ್ವಾಸವೂ ಮತ್ತು ನವಚೈತನ್ಯದ ಶಕ್ತಿಯು ತುಂಬಿಕೊಳ್ಳುತ್ತದೆ. ಇಂತಹ ಶಕ್ತಿಯನ್ನು ಸಂಪೂರ್ಣವಾಗಿ ಸ್ವೀಕರಿಸುವುದಕ್ಕಾಗಿಯೇ, ಸಾಷ್ಟಾಂಗ ನಮಸ್ಕಾರದ ಭಂಗಿಯಲ್ಲಿ ಗುರುಹಿರಿಯರಿಗೆ ನಾವು ನಮಿಸುವುದು.

**ಗೌರವಾರ್ಪಣೆಯನ್ನು ಸಲ್ಲಿಸುವ ವಿವಿಧ ರೀತಿಗಳು ಹೀಗಿವೆ:**

**ಪ್ರತ್ಯುತ್ಥಾನ**–ಗುರುಹಿರಿಯರು ಸಮೀಪಿಸಿದಾಗ, ಎದ್ದು ನಿಂತು ಸ್ವಾಗತವನ್ನು ಕೋರುವುದು.

**ನಮಸ್ಕಾರ**–ನಮಸ್ತೇ ಎಂದು ಹೇಳುವ ಮೂಲಕ ಗೌರವವನ್ನು ಸೂಚಿಸುವಿಕೆ.

**ಉಪಸಂಗ್ರಹಣ**–ಗುರುಹಿರಿಯರ ಆದಗಳನ್ನು ಸ್ಪರ್ಶಿಸಿ ನಮಸ್ಕರಿಸುವುದು.

**ಸಾಷ್ಟಾಂಗ**–ಎರಡು ಪಾದ, ಎರಡು ಮೊಣಕಾಲು, ಎದೆ, ಹಣೆ, ಜೋಡಿಸಿದ ಕರಗಳೆರಡು ತೋಳುಗಳು–ಇಷ್ಟೂ ಅಂಗಗಳೂ ನೆಲಕ್ಕೆ ತಾಗುವ ಹಾಗೆ ಬೋರಲಾಗಿ ಬಿದ್ದು ಗುರುಹಿರಿಯರ ಪಾದಗಳನ್ನು ಸ್ಪರ್ಶಿಸಿ ನಮಸ್ಕರಿಸುವುದು.

**ಪ್ರತ್ಯಭಿವಾದನ**–ಗೌರವ ಸ್ವೀಕರಿಸಿದ್ದನ್ನು ಪುನಃ ಪ್ರತಿಬಿಂಬಿಸುವುದು/ ಅರ್ಪಿಸುವುದು.

ಯಾರು ಯಾರಿಗೆ ನಮಸ್ಕರಿಸಬೇಕೆನ್ನುವ ವಿಧಿಯನ್ನು ಶಾಸ್ತ್ರದಲ್ಲಿ ತಿಳಿಸಲಾಗಿದೆ. ಸಂಪತ್ತು, ವಂಶದ ಕೀರ್ತಿ,ವಯಸ್ಸು, ನೈತಿಕ ಬಲ ಮತ್ತು ಅಧ್ಯಾತ್ಮ ಜ್ಞಾನ, ಈ ಏರುವ ಕ್ರಮದಲ್ಲಿ ಪ್ರಾಮುಖ್ಯತೆಯಲ್ಲಿ, ಮನುಷ್ಯರು ಗೌರವವನ್ನು ಸ್ವೀಕರಿಸುವುದಕ್ಕೆ ಅರ್ಹರು. ಆದ್ದರಿಂದಲೇ, ಒಬ್ಬ ರಾಜ, ಒಂದು ಸಾಮ್ರಾಜ್ಯದ ಒಡೆಯನಾಗಿದ್ದರೂ ಸಹ ಅತ್ಯಂತ ಗೌರವದಿಂದ ಒಬ್ಬ ಆತ್ಮಜ್ಞಾನಿಗೆ ಶಿರಬಾಗಿ ನಮಸ್ಕರಿಸುವನು. ಈ ಅಂಶವನ್ನು ಎತ್ತಿಹಿಡಿಯುವ ಅನೇಕ ಆಖ್ಯಾಯಿಕೆಗಳನ್ನು ರಾಮಾಯಣ ಮತ್ತು ಮಹಾಭಾರತದಲ್ಲಿ ನಾವು ಕಾಣಬಹುದು.

ಹೀಗೆ ಈ ಸಂಪ್ರದಾಯವು ಪರಸ್ಪರ ಪ್ರೇಮ ಮತ್ತು ಗೌರವದ ವಾತಾವರಣವನ್ನು ಜನರಲ್ಲಿ ಮೂಡಿಸಿ, ಸಹಬಾಳ್ವೆ ಮತ್ತು ಸಾಮರಸ್ಯವು ಕ್ರಮವಾಗಿ ಕುಟುಂಬ ಹಾಗೂ ಸಮಾಜದಲ್ಲಿ ನೆಲೆಸುವಂತಾಗುತ್ತದೆ.

*(ವತ್ಸಲಾ, ಬೆಂಗಳೂರು)*



# ಕನ್ನಡ ರಾಜ್ಯೋತ್ಸವ ಮತ್ತು ಮಹಿಳೆ

ಕನ್ನಡ ರಾಜ್ಯೋತ್ಸವ ನಾಡಹಬ್ಬವಾಗಿದೆ. ಮೊದಲು ಕರ್ನಾಟಕ ಅನೇತ ಪ್ರಾಂತ್ಯಗಳಾಗಿ ವಿಭಜನೆಯಾಗಿತ್ತು. 1973ರ ನವೆಂಬರ್ 1 ಕರ್ನಾಟಕವೆಂದು ನಾಮಕರಣವಾಯಿತು. ನವೆಂಬರ್ 1, 1956ರಂದು ಏಕೀಕರಣಗೊಳ್ಳುವ ಮೊದಲು ಮೈಸೂರು ಸಂಸ್ಥಾನ ಎಂಬ ಹೆಸರನ್ನು ಪಡೆದುಕೊಂಡಿತು. ಕನ್ನಡ ಭಾಷೆ, ಕರ್ನಾಟಕ ಪ್ರಾಂತ್ಯದಲ್ಲಿ ಮಾತೃಭಾಷೆಯನ್ನಾಗಿ ಮಾಡಿದ್ದು ಹಾಗೂ ಕನ್ನಡದ ಮುನ್ನುಡಿ ಬರೆದದ್ದು ಈ ಸಂದರ್ಭದಲ್ಲಿಯೇ ರಾಜ್ಯದ ಹಬ್ಬ, ನಾಡಹಬ್ಬವೆಂದು ನವೆಂಬರ್ ತಿಂಗಳಪೂರ್ತಿ ಕರ್ನಾಟಕದೆಲ್ಲೆಡೆ ವಿಜೃಂಭಣೆಯಿಂದ ಆಚರಿಸುತ್ತೇವೆ.

ಕರ್ನಾಟಕದಲ್ಲಿ ಕನ್ನಡ ಭಾಷೆ, ಕನ್ನಡದ ಅಸ್ತಿತ್ವವನ್ನು ಉಳಿಸಿಕೊಂಡಿರುವುದು ಕಡಿಮೆ. ಪರಭಾಷಾ ವ್ಯಾಮೋಹಕ್ಕೆ ಒಳಗಾಗಿ ಜನ ಕನ್ನಡದ ಅಸ್ತಿತ್ವ ಕಳೆದುಕೊಂಡಿದ್ದಾರೆ. ಕರ್ನಾಟಕ ಪ್ರದೇಶ ಮರುಭೂಮಿಯಾಗಿದೆ. ಸರ್ಕಾರದ ಆಡಳಿತ ಒಂದೇ ರೀತಿ ಇರಬೇಕು. ಹೇಳುವುದೊಂದು, ನಡೆಯುವುದೊಂದಾಗಬಾರದು. ಕರ್ನಾಟಕ ಸರ್ಕಾರ ಹಳ್ಳಿಗಳ ಪ್ರದೇಶಕ್ಕೆ ಹೆಚ್ಚು ಒತ್ತು ಕೊಟ್ಟು ಪ್ರೋತ್ಸಾಹ ನೀಡಿ ಕರುನಾಡನ್ನು ಉಳಿಸಿ ಬೆಳೆಸಬೇಕು.

ಚೆನ್ನಪ್ಪ, ಬೆನೆಗಲ್, ಆಲೂರು ವೆಂಕಟರಾಯ, ಬಾಲಗಂಗಾಧರ ತಿಲಕ್, ಮಿರ್ಜಾ ಇಸ್ಮಾಯಿಲ್, ಬಿ.ಎಂ.ಶ್ರೀ. ಮತ್ತು ಕುವೆಂಪು ಈ ಮಹಾನ್ ವ್ಯಕ್ತಿಗಳು ಕನ್ನಡದ ಉಳಿವಿಗಾಗಿ ಹೋರಾಡಿದ್ದಾರೆ. ಇವರ ಪರಿಶ್ರಮದಿಂದಾಗಿ ಕರ್ನಾಟಕ ಸುರಕ್ಷಿತವಾಗಿದೆ. ಆದರೆ ಸರಿಯಾದ ರೀತಿಯಲ್ಲಿ ಕಾಪಾಡಿಕೊಂಡು ಹೋಗುವುದು ಕನ್ನಡಿಗರ ಕರ್ತವ್ಯವಾಗಿದೆ.

ಮಹಿಳೆಯರು ಸ್ವಾತಂತ್ರ್ಯ ಬರುವ ಮೊದಲಿನಿಂದ ಇಂದಿನವರೆಗೂ ಹೋರಾಡುತ್ತಾ ಬಂದಿದ್ದಾರೆ. ಧಾರ್ಮಿಕ, ಆರ್ಥಿಕ, ರಾಜಕೀಯ, ಸಾಮಾಜಿಕ ಕ್ಷೇತ್ರದಲ್ಲೆಲ್ಲ ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಪರಿಪಾಲಿಸುತ್ತಾ ಬಂದಿದ್ದಾರೆ. ನಮ್ಮ ನಾಡನ್ನು ಅವರ ಸಹಕಾರದಿಂದ ಪೋಷಿಸಿದ್ದಾರೆ. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರಮಹಿಳೆಯರೆಂದರೆ ಆನಿ ಬೆಸೆಂಟ್, ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಒನಕೆ ಓಬವ್ವ, ಸರೋಜಿನಿ ನಾಯ್ಡು ಮತ್ತು ವಿಜಯಲಕ್ಷ್ಮಿ ಪಂಡಿತ್ ಮುಂತಾದವರು ಕೆಚ್ಚೆದೆಯಿಂದ ಹೋರಾಡದ ವೀರ ಮಹಿಳೆಯರಾಗಿ ನಮಗೆಲ್ಲ ಆದರ್ಶವಾಗಿದ್ದಾರೆ. ಮೊಟ್ಟಮೊದಲ ರಾಯಭಾರಿ ವಿಜಯಲಕ್ಷ್ಮಿ ಪಂಡಿತ್ (ನೆಹರೂ ತಂಗಿ) ಸುಮಾರು 12–13 ವರ್ಷಗಳ ದೀರ್ಘಕಾಲ ಮೊಟ್ಟಮೊದಲ ಪ್ರಧಾನಿಯಾಗಿ ಸೇವೆ ಸಲ್ಲಿಸಿದ್ದಾರೆ. ಸಿರಿಮಾವೋ ಭಂಡಾರನಾಯಕೆ ಪ್ರಪಂಚದ ಪ್ರಥಮ ಮಹಿಳಾ ಪ್ರಧಾನಿಯಾಗಿದ್ದಾರೆ. ಆರ್ಥಿಕ ಕ್ಷೇತ್ರ, ಸಾಹಿತ್ಯ ಕ್ಷೇತ್ರ, ಭೂಸೇನೆ, ವಾಯುಸೇನೆಗಳಲ್ಲಿ ಮಹಿಳೆಯು ಸಾಕಷ್ಟು ದುಡಿದಿದ್ದ ಪುರುಷರು ಮಾಡುವಂಥ ಪರಿಶ್ರಮದ ಕೆಲಸ ಮಾಡಿ ಒಲಿಂಪಿಕ್ಸ್ ಆಟದಲ್ಲಿ ಹಾಗೂ ಇನ್ನಿತರ ಕ್ರೀಡೆಗಳಲ್ಲಿ ಸಾಹಸ ಮಾಡಿ ತೋರಿಸಿದ್ದಾರೆ. ದೇಶಕ್ಕೆ ಹಾಗೂ ನಾಡಿಗೆ ಕೀರ್ತಿ ತಂದಿದ್ದಾರೆ. ಉನ್ನತ ಹಾಗೂ ಆದರ್ಶದಿಂದ ಸರ್ವತೋಮುಖ ಏಳಿಗೆಗಾಗಿ ದುಡಿದು ಶ್ರಮಿಸಿ ತೊಟ್ಟಿಲನ್ನು ತೂಗುವ ಕೈ ದೇಶವನ್ನೂ ಆಳಬಲ್ಲದೆಂದು ಸಾಬಿತುಪಡಿಸಿದ್ದಾರೆ.

ಮಹಿಳೆ ವೈಚಾರಿಕವಾಗಿ ಪ್ರತಿಭಟಿಸಿ ಮೂಲಭೂತ ಹಕ್ಕಿಗಾಗಿ ಮುಂದುವರೆದು ಹೋರಾಡಿ ಜಯಿಸಬೇಕು. ಮಹಿಳೆ ನಾಲ್ಕು ಗೋಡೆಗಳ ಮಧ್ಯೆಯೇ ಇರದೆ ಶೋಷಣೆಯಿಂದ ಹೊರಬಂದು ತನ್ನ ಹಕ್ಕಿಗೋಸ್ಕರ ಅನಿವಾರ್ಯವಾಗಿ ಹೋರಾಡಿ ನಂತರ Something is better than nothing ಎನ್ನುವಂತೆ ತನ್ನ ವ್ಯಕ್ತಿತ್ವವನ್ನು ಉಳಿಸಿಕೊಳ್ಳುವುದು, ನಿರಾಶೆ, ದುಃಖವನ್ನು ತಳ್ಳಿಹಾಕಿ ಅಬಲೆ, ಅಸಹಾಯಕತೆ ಎನ್ನುವುದನ್ನು ಬಿಟ್ಟು ಆಶಾವಾದಿಯಾಗಿರಬೇಕು. ಆಗ ಪ್ರಯತ್ನಕ್ಕೆ ತಕ್ಕ ಫಲ ಸಿಗುತ್ತದೆ. ಜನ್ಮ ಕೊಟ್ಟ ತಾಯಿ ಹಾಗೂ ವಾಸಿಸುವ ಭೂಮಿ ಸ್ವರ್ಗಕ್ಕಿಂತ ಮಿಗಿಲಾದುದು. ಎಲ್ಲಿ ಸ್ತ್ರೀಯನ್ನು ಗೌರವಿಸುತ್ತಾರೋ ಅಲ್ಲಿ ದೇವತೆಗಳು ನೆಲೆಸಿರುತ್ತಾರೆ. ಮಹಿಳೆ ವ್ಯಕ್ತಿತ್ವವನ್ನು ಅರಿತು ಗೌರವಿಸಬೇಕಾದ್ದು ಪುರುಷನ ಹಾಗೂ ಸಮಾಜದ ಆದ್ಯ ಕರ್ತವ್ಯ.

*(ಡಾ. ಕಮಲ ಜೈನ್, ಮೈಸೂರು)*

---

# ಕನ್ನಡ ರಾಜ್ಯೋತ್ಸವ

ಬಂದಿತು ಬಂದಿತು ಕನ್ನಡ ರಾಜ್ಯೋತ್ಸವ
ಕನ್ನಡಿಗರ ಮನೆ ಮನಗಳಲ್ಲಿ ಕನ್ನಡದ ಉತ್ಸವ.

ಹಾರಿದು ಹಾರಿತು ಕನ್ನಡದ ಬಾವುಟ
ಅದುವೇ ನಮ್ಮ ದ್ವಿವರ್ಣದ ಬಾವುಟ.

ಶ್ರೀಕೃಷ್ಣದೇವರಾಯನು ಆಳಿದ ಕನ್ನಡ ನಾಡು
ಕುವೆಂಪು, ದ.ರಾ. ಬೇಂದ್ರೆ ಬಾಳಿದ ನಾಡು.

ಸುಸಂಸ್ಕೃತಿ ಚರಿತೆಯ ತಾಯ್ನಾಡು
ಮಹೋನ್ನತ ರಸಋಷಿಗಳ ಬೀಡು.

ನಾವಿರುವ ತಾಣವು ಗಂಧದ ಗುಡಿ
ನಾವಾಡುವ ನುಡಿಯೇ ಕನ್ನಡ ನುಡಿ.

ಹಸುರಿನ ಬನಸಿರಿ ಸಂಪತ್ತಿನಲಿ
ಕೆಚ್ಚೆದೆಯಿರಲಿ ನಮ್ಮ ಕನ್ನಡದಲಿ

ಭಾರತ ಮಾತೆಯ ಮಡಿಲಿನಲಿ
ಹಿರಿ ಕನ್ನಡನಾಡು ನಮ್ಮದಾಗಿರಲಿ

ಸಿರಿಗನ್ನಡಂ ಗೆಲ್ಗೆ
ಸಿರಿಗನ್ನಡಂ ಬಾಳ್ಗೆ
ಜೈ ಕರ್ನಾಟಕ ಮಾತೆ



(ಮಮತಾ, ಕಳಲೆ)



# ಇರುವೆಗಳ ಹಾದಿ ಹಿಡಿದು ಜಾಣರಾಗಿ!

ಮಾನವನ ಇತಿಹಾಸದ ನಿರ್ಮಿತಿಯಲ್ಲಿ ವಿಜ್ಞಾನದ ಪಾತ್ರ ಹಿರಿದು. ಜೀವನ ಸರಳೀಕರಣದ ಆಕಾಂಕ್ಷೆಯ ಹಿನ್ನೆಲೆಯು ನಿಸರ್ಗವನ್ನು ಅರ್ಥೈಸುವ, ಸಂದರ್ಭವನ್ನು ಕೇವಲ ಕುತೂಹಲ ಮತ್ತು ಪ್ರಶ್ನಿಸುವ ಪ್ರಕ್ರಿಯೆಯಿಂದ ಆರಂಭವಾಗಿದೆ. ಈ ನೆಲದ ಮೇಲಿನ ಅನಂತವಾದ ಮಹತ್ವಗಳ ಅರಿವಿನ ಸೃಷ್ಟಿಯಲ್ಲಿ ವಿಜ್ಞಾನವು ಸದಾ ಮುಂದು. ಮಹತ್ವದ ಸಂಗತಿಗಳೆಲ್ಲೂ ಅತ್ಯಂತ ಸರಳ ಪತ್ತೆದಾರಿಕೆಗಳಿಂದಲೂ, ವಿಚಾರಗಳ ತಡಕಾಟಗಳಿಂದಲೂ ಆರಂಭವಾಗಿವೆ. ಜತೆಗೆ ಅನಂತವಾದ ಸಂಗತಿಗಳನ್ನು ಒಟ್ಟು ಮಾಡಿವೆ. ಈಗ ನೀವು ಈ ಪತ್ರಿಕೆಯನ್ನು ಓದುತ್ತಿರುವಾಗಲೇ ನಿಮ್ಮ ದೃಷ್ಟಿಗೆ ಗೋಡೆಯ ಮೇಲೋ ಅಥವಾ ನೆಲದ ಮೇಲೆಲ್ಲೋ ಹರಿದಾಟುವ ಇರುವೆ ಸಾಲು ಕಂಡೀತು. ಇರುವೆ ಸಾಲು ಕಂಡಿರುವುದು ಇದೇನು ಮೊದಲ ಸಲವೂ ಆಗಿರಲಾರದು. ಹಿಂದೆ ದಿನವೂ ಕಂಡಿದ್ದರೂ ಆಶ್ಚರ್ಯವಿಲ್ಲ.

ಎಂದಾದರೂ ಅದೇಕೆ ಇರುವೆಗಳು ಸಾಲುಗಟ್ಟಿ, ಹೆಚ್ಚು ಕಡಿಮೆ ನೇರವಾಗಿಯೇ ಹೋಗುತ್ತಿವೆ ಎಂದು ಪ್ರಶ್ನಿಸಿಕೊಂಡಿದ್ದೇವೆಯೇ? ಸಾಲುಗಟ್ಟುವ ಪ್ರಯತ್ನದಲ್ಲಿ ಇರುವೆಗಳ ವರ್ತನೆಯನ್ನು ಗಮನಿಸಿದ್ದೇವೆಯೇ? ಉತ್ತರ ನಿಮ್ಮದೇ! ಇಂತಹುದ್ದೇ ಪ್ರಶ್ನೆಯು ಖ್ಯಾತ ಭೌತವಿಜ್ಞಾನಿ ರಿಚರ್ಡ್ ಫೈನ್‌ಮನ್ ಅವರನ್ನೂ ಕಾಡಿತ್ತು. ಫೈನ್‌ಮನ್ ವಿಜ್ಞಾನ ಜಗತ್ತಿನ ಮಾಂತ್ರಿಕರೇ ಸರಿ. ಎಳೆಯ ಮನಸ್ಸಿನ ಆತನಲ್ಲಿ ಮೂಡಿದ ಈ ಪ್ರಶ್ನೆಗೆ ಆತ ಮಾಡಿದ್ದೇನು?

ಸರಿ ಒಂದಷ್ಟು ಸಕ್ಕರೆಯನ್ನು ತಂದು ಚೆಲ್ಲಿ ಇರುವೆಗಳು ಬಂದಾವೇ? ಎಂದು ಕಾಯುತ್ತಾ ಕುಳಿತರು. ಅವರ ಅನಿಸಿಕೆಯಂತೆಯೇ ಇರುವೆಗಳು ಬಂದವು. ಹಾಗಂತ ಅವೇನು ಒಮ್ಮೆಲೆ ಬಂದು ದಾಳಿ ಇಟ್ಟು ಫೈನ್‌ಮನ್‌ರ ಇಳಿಯುವ ಕುತೂಹಲಕ್ಕೆ ಉತ್ತರವಾಗಿ ನೆರವಾಗಲಿಲ್ಲ. ಒಂದೊಂದೇ ಬಂದವು. ಒಂದೆರಡು ನಿಧಾನವಾಗಿ ಬರುತ್ತಾ, ದಂಡು ಬಂದು ಸೇರಿತ್ತು. ಅವರು ಮಾಡಿದ್ದೇನು? ಮೊದಲ ಇರುವೆ ಆಗಮನದ ದಾರಿಯನ್ನು ಬಣ್ಣದ ಪೆನ್ಸಿಲಿನಲ್ಲಿ ಗುರುತಿಸಿದರು. ಅನಂತರ ಹಿಂದೆಯೇ ಬಂದವುಗಳ ದಾರಿಯನ್ನು ಗುರುತಿಸುತ್ತಾ ಕುಳಿತರು. ಬಣ್ಣದ ಸಾಲಿನ ದಾರಿಗಳಲ್ಲಿ ದರ್ಶನಕ್ಕೆ ಮೊದಲಾಯಿತು. ಅವುಗಳ ವೀಕ್ಷಣೆಯಿಂದ ಒಂದು ತೀರ್ಮಾನ ಮಾಡಿದ್ದರು.

ಅದೆಂದರೆ ಮೊದಲ ಇರುವೆ ಸಾಕಷ್ಟು ಅಡ್ಡಾದಿಡ್ಡಿಯಾಗೇ ಚಲಿಸಿತ್ತು. ಆದರೆ ಅದರ ಹಿಂದೆ ಬಂದ ಇರುವೆ ಅದರ ದಾರಿಯನ್ನು ಗಮನಿಸುತ್ತಾ ಸರಿಪಡಿಸುತ್ತಾ ಸ್ವಲ್ಪವೇ ನೇರವಾಗಿ ಹೋಗಿತ್ತು. ಹೀಗೆ ಒಂದನ್ನೊಂದು ಅವಲಂಬನದಲ್ಲಿ ಇರುವೆಗಳು ತಮ್ಮ ಮುಂದಿನ ಇರುವೆಯ ದಾರಿಯನ್ನು ಮತ್ತಷ್ಟು ನೇರವಾಗಿಸುತ್ತಾ ಹೆಚ್ಚೂ ಕಡಿಮೆ ಸರಳ ರೇಖೆಯಲ್ಲೇ ಸಾಲನ್ನು ನಿರ್ಮಿಸಿದ್ದವು.

ಹತ್ತಾರು ವರ್ಷಗಳ ನಂತರ 90ರ ದಶಕದಲ್ಲಿ ಇದೇ ಪ್ರಶ್ನೆಯನ್ನೇ ಇಸ್ರೇಲಿನ ಖ್ಯಾತ ಕಂಪ್ಯೂಟರ್ ತಜ್ಞರಾದ ಆಲ್ಫ್ರೆಡ್ ಬ್ರುಕ್‌ಸ್ಟೀನ್ ಎಂಬುವರು ಪುನರ್ ಪರಿಶೀಲನೆಗೆ ಒಳಪಡಿಸಿದರು. ಇರುವೆಗಳಿಗೇನು ಭೂಮಿಯ ಜ್ಯಾಮಿತಿಯ ಅರಿವಿಲ್ಲ ಅಲ್ಲವೇ. ಅದಕ್ಕಾಗಿ ಕಂಪ್ಯೂಟರ್ ಮಾದರಿಯಲ್ಲಿ ಗಣಿತೀಯ ಇರುವೆಗಳನ್ನು ನಿರ್ಮಿಸಿ, ಅದಕ್ಕೆ ಒಂದನ್ನೊಂದು

ಅನುಸರಿಸುವಂತೆ ಪ್ರೋಗ್ರಾಮಿಗೆ ಒಳಪಡಿಸಿದರು. ಜೊತೆಗೆ ಅವು ಒಂದನ್ನೊಂದು ಡಿಕ್ಕಿ ಹೊಡೆಯದಂತೆಯೂ ಸಾಕಷ್ಟು ದೂರದಲ್ಲಿಯೂ ಚಲಿಸುತ್ತಲೇ ಅನುಸರಿಸಬೇಕಾದ ನಿಯಮದ ಕಡ್ಡಾಯಕ್ಕೆ ಒಳಪಡಿಸಿದರು. ಆಶ್ಚರ್ಯವೆಂಬಂತೆ ಅಡ್ಡಾದಿಡ್ಡಿಯಾಗಿ ಓಡುತ್ತಲೇ, ಪ್ರತಿ ಬಾರಿಯೂ ದಾರಿಯನ್ನು ಸರಿಪಡಿಸಿಕೊಂಡು ನೇರವಾಗೇ ಸರಳ ರೇಖೆಯ ನಿರ್ಮಿಸಿದ ಮಾದರಿ ದೊರೆತಿತು. ಗಣಿತೀಯವಾಗಿ ಇದನ್ನು ನಾನ್‌ಲೀನಿಯರ್ ಡಿಫರೆನ್ಷಿಯಲ್ ಸಮೀಕರಣದಿಂದ ಸಾಬೀತು ಮಾಡಬಹುದಾಗಿದೆ. ಅಂತೂ ಇದರಿಂದ ಕಂಪ್ಯೂಟರ್ ಮಾದರಿಯಲ್ಲಿ ಜೀವಶಾಸ್ತ್ರೀಯ ಅಧ್ಯಯನಗಳಿಗೆ ಅನುವಾಯಿತು. ಇರುವೆಗಳ ಹಿಂದೆ ಹೊರಟ ಫೈನ್‌ಮನ್‌ರ ಉತ್ತರದಿಂದ ವಿಜ್ಞಾನಕ್ಕೊಂದು ದೊಡ್ಡ ಲಾಭವೇ ಆಗಿತ್ತು.

ಈಗಂತೂ ಜೀವಶಾಸ್ತ್ರ ಅಧ್ಯಯನಗಳಲ್ಲಿ ಗಣಿತದ ಅನ್ವಯಗಳ ಸಾಧ್ಯತೆಯಲ್ಲಿ ಹಲವಾರು ಸಂಶೋಧನೆಗಳು ನಡೆಯುತ್ತಿವೆ. ಪುಟ್ಟ ಇರುವೆಯೊಂದು ಕುತೂಹಲಕ್ಕೆ ದಾರಿ ಮಾಡಿಕೊಟ್ಟ ವಿಶೇಷ ಇದು.

ಇರುವೆಗಳಂತೂ ಕೆಲಸದ ನಿರಂತರತೆಯಲ್ಲಿ ಸಾಲುಗಟ್ಟುತ್ತಾ ಜಾಣತನದ ಹುಡುಕಾಟ ನಡೆಸುತ್ತಲೇ ಇರುತ್ತವೆ. ಹೀಗೆ ಸದಾ ನಮ್ಮ ಕೆಲಸದಲ್ಲಿ ನಾವೂ ನಿರಂತರವಾಗಿ ತನ್ಮಯರಾಗಿ ಒಳಗೊಳ್ಳಲು ಇರುವೆಗಳಂತೆ ಚಟುವಟಿಕೆಯಿಂದ ಇರುವುದು ಸೂಕ್ತ.

ಡಾ. ಟಿ.ಎಸ್. ಚನ್ನೇಶ್

## ರಾಷ್ಟ್ರೀಯ ಅಂಚೆ ಸಪ್ತಾಹ, 2017




ರಾಷ್ಟ್ರೀಯ ಅಂಚೆ ಸಪ್ತಾಹ, 2017ನ್ನು ಮೈಸೂರಿನ ಮುಖ್ಯ ಅಂಚೆ ಕಚೇರಿಯಲ್ಲಿ 14-11-2017ರಂದು ಕಾರ್ಯಕ್ರಮವನ್ನು ಮಹಿಳಾ ವಿಶೇಷ ಪತ್ರಿಕೆಯ ಸಹಯೋಗದೊಂದಿಗೆ ನಡೆಸಲಾಯಿತು. ಇತ್ತೀಚೆಗೆ ಅಂಚೆ ಇಲಾಖೆಯಲ್ಲಿ ನಿವೃತ್ತರಾದ ಶ್ರೀಮತಿ ಜಯಲಕ್ಷ್ಮಿ ರವರಿಗೆ ಸನ್ಮಾನ ಮಾಡಲಾಯಿತು. ಚಿತ್ರದಲ್ಲಿ ಶ್ರೀ ಡಾ. ಕೆ.ಎಸ್. ನಾಗಪತಿ, ಶ್ರೀ ಎನ್. ಪ್ರಕಾಶ್, ವಿಭಾಗೀಯ ಹಿರಿಯ ಅಂಚೆ ಅಧೀಕ್ಷಕರು, ಶ್ರೀ ಎಸ್.ಜಿ. ಕುಮಾರಾರಾಧ್ಯ, ಶ್ರೀ ಹೆಚ್.ವಿ. ಸುಬ್ಬರಾವ್, ಶ್ರೀಮತಿ ಬಿ.ಸಿ. ಮೀರಾ, ಅಂಚೆ ಇಲಾಖೆಯಲ್ಲಿನ ನೂತನ ಸೌಲಭ್ಯಗಳನ್ನು ಕಾರ್ಯಕ್ರಮದಲ್ಲಿ ತಿಳಿಸಲಾಯಿತು.



## ಶ್ರೀ ಧಾತ್ರಿ ಹವನ ಹಾಗೂ ಶ್ರೀ ಸತ್ಯನಾರಾಯಣ ಪೂಜೆ

ಶ್ರೀ ಯಾಜ್ಞವಲ್ಕ್ಯ ಶುಕ್ಲ ಯುಜರ್ವೇದ ಮಹಾಸಭಾ ಬೋಗಾದಿ, ಮೈಸೂರು ಇವರಿಂದ ಶ್ರೀ ಧಾತ್ರಿ ಹವನ ಹಾಗೂ ಶ್ರೀ ಸತ್ಯನಾರಾಯಣ ಪೂಜೆಯನ್ನು ದಿನಾಂಕ 5-11-2017ರಂದು ಬೆಳಿಗ್ಗೆ 9.00 ಗಂಟೆಗೆ ಸಭೆಯ ಆವರಣದಲ್ಲಿ ನಡೆಸಲಿದ್ದು ಶಾಖಾ ಬಾಂಧವರು ಹಾಗೂ ನಾಗರೀಕರು ಭಾಗವಹಿಸಬೇಕೆಂದು ಮಹಾಸಭೆಯ ಗೌ. ಮಹಾಪೋಷಕರು ಹಾಗೂ ಗೌ. ಅಧ್ಯಕ್ಷರಾದ ಶ್ರೀ ಆರ್. ರಾಮಕೃಷ್ಣ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕರ್ನಾಟಕದ ಪ್ರಥಮ ಮಹಿಳಾ ಡಿಜಿಪಿ

1983ನೇ ಐಪಿಎಸ್ ಪೊಲೀಸ್ ಆಫೀಸರ್ ಆಗಿ 21-12-1983ರಂದು ಸೇವೆಗೆ ಕರ್ನಾಟಕ ಕೇಡರ್‌ನಲ್ಲಿ ನೇಮಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ **ಶ್ರೀಮತಿ ನೀಲಮಣಿ ಎನ್. ರಾಜು**ರವರನ್ನು ಕರ್ನಾಟಕ ಸರ್ಕಾರ ಪೊಲೀಸ್ ಡಿಜಿ ಹುದ್ದೆಗೆ ಮೊಟ್ಟ ಮೊದಲನೆಯದಾಗಿ ಮಹಿಳೆಯನ್ನು ನೇಮಿಸಿದೆ. ಈ ನೂತನ ಹುದ್ದೆ ಸಂತಸ ತಂದಿದ್ದು, ಸರಕಾರ ಇಟ್ಟಿರುವ ನಂಬಿಕೆ ಉಳಿಸಿಕೊಳ್ಳಲು ಪ್ರಯತ್ನಿಸಲಾಗುವುದೆಂದು ಅಲ್ಲದೆ ಇಲಾಖೆಯಲ್ಲಿರುವ ಪೇದೆಗಳು ಕಣ್ಣು ಕಿವಿಗಳಿದ್ದಂತೆ ಎಂದು ಸಂತೋಷವನ್ನು ಹಂಚಿಕೊಂಡಿದ್ದಾರೆ. ಮುಂಬರುವ ವಿಧಾನಸಭಾ ಚುನಾವಣೆಯು ಹೆಚ್ಚಿನ ಜವಾಬ್ದಾರಿ ಇದ್ದು ಅದಕ್ಕೆ ಪೇದೆಯಿಂದ ಹಿಡಿದು ಎಲ್ಲ ಅಧಿಕಾರಿಗಳು ಸಹಕಾರವನ್ನು ನೀಡಬೇಕೆಂದು ಕೋರಿದ್ದಾರೆ. ಇವರಿಗೆ ಮ.ವಿ. ಬಳಗ ಶುಭವನ್ನು ಕೋರಿದೆ.

## ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಶುಭಕಾಮನೆಗಳು

ಹೊರ ರಾಜ್ಯದವರಾಗಿದ್ದು ಕರ್ನಾಟಕದಲ್ಲಿ ಐಎಎಸ್/ ಐಪಿಎಸ್ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಮಹಿಳೆಯರು ಕನ್ನಡವನ್ನು ಸ್ಪಷ್ಟವಾಗಿ ಮಾತನಾಡಲು, ಓದಲು ಹಾಗೂ ಬರೆಯಲು ಕಲಿತಿದ್ದು ಸರಕಾರದ ಕೆಲಸಗಳನ್ನು ಕನ್ನಡದಲ್ಲೇ ವ್ಯವಹರಿಸುತ್ತಿರುವುದರಿಂದ ಮ.ವಿ. ಬಳಗ ಶುಭವನ್ನು ಕೋರಿದೆ.



ಶ್ರೀಮತಿ ಕೆ. ರತ್ನಪ್ರಭಾ, ಐಎಎಸ್



ಡಾ. ಶಾಲಿನಿ ರಜನೀಶ್, ಐಎಎಸ್



ಶ್ರೀಮತಿ ಸಿ. ಶಿಖಾ, ಐಎಎಸ್



ಶ್ರೀಮತಿ ನೀಲಮಣಿ ಎನ್.ರಾಜು, ಐಪಿಎಸ್

## ಹಂಪಿಯಲ್ಲಿ ನೂತನ ಮೃಗಾಲಯ

ವಿಶ್ವ ಪಾರಂಪರಿಕ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಐತಿಹಾಸಿಕ ಸ್ಥಳ ಹಾಗೂ ದೇಶ ವಿದೇಶಗಳ ಪ್ರವಾಸಿಗರ ಆಕರ್ಷಣೆಯ ಪ್ರಮುಖ ಪ್ರವಾಸಿ ಕೇಂದ್ರ ಹಂಪಿ ಬಳಿ ನೂತನ ಮೃಗಾಲಯ ತಲೆ ಎತ್ತಿದ್ದು, ನ. 3ರಂದು ಲೋಕಾರ್ಪಣೆಗೊಳ್ಳಲಿದೆ ಎಂದು ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷೆ ಮಲ್ಲಿಗೆ ವೀರೇಶ್ ತಿಳಿಸಿದರು.

## ಗಾನಕೋಗಿಲೆಯ ಗಾನಯಾನಕ್ಕೆ ತೆರೆ

ಆರು ದಶಕಗಳಿಂದ ತಮ್ಮ ಮಧುರ ಕಂಠದ ಮೂಲಕ ಸಂಗೀತ ಪ್ರಿಯರ ಮನ ಗೆದ್ದಿರುವ ಎಸ್. ಜಾನಕಿ ಅವರ ಹಾಡಿಗೆ ಒಂದೆಡೆ ಎಲ್ಲರೂ ಸಂತಸದಿಂದ ಕಿವಿಯಾದರೆ, ಮತ್ತೊಂದೆಡೆ ಭಾವುಕತೆ ಕ್ಷಣಗಳು ಕಣ್ಣಾಲಿಗಳಲ್ಲಿ ತೇಲಿದವು.

ಮಾನಸಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ಎಸ್. ಜಾನಕಿ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಏರ್ಪಡಿಸಲಾಗಿದ್ದ ಸಂಗೀತ ಸಂಜೆಯಲ್ಲಿ ಎಸ್. ಜಾನಕಿ ಮಧುರ ಹಾಡಿನ ಸ್ಮರಣೀಯ ಕಾರ್ಯಕ್ರಮಕ್ಕೆ ಸಾವಿರಾರು ಮಂದಿ ಸಾಕ್ಷಿಯಾದರು. ರಾಜವಂಶಸ್ಥೆ ಶ್ರೀಮತಿ ಪ್ರಮೋದಾದೇವಿ ಒಡೆಯರ್ ಎಸ್. ಜಾನಕಿ ಅವರನ್ನು ಸನ್ಮಾನಿಸಿದರು.

## ಗರ್ಭಗುಡಿ ಬಾಗಿಲಿಗೆ ಚಿನ್ನದ ಪಟ್ಟಿ

ಬೆಂಗಳೂರು ಮೂಲದ ವಕೀಲರಾದ ಜಯಶ್ರೀ ಶ್ರೀಧರ್ ಎಂಬುವರು ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇವಾಲಯದ ಗರ್ಭಗುಡಿ ಬಾಗಿಲಿಗೆ ನವದುರ್ಗೆಯರ ಚಿನ್ನದ ಪಟ್ಟಿಯನ್ನು ಕೊಡುಗೆಯಾಗಿ ನೀಡಿದ್ದಾರೆ.

ಕೋಟ್ಯಾಂತರ ರೂ. ಮೌಲ್ಯದ ನವದುರ್ಗೆಯರ ಚಿನ್ನದ ಪಟ್ಟಿ ಬಾಗಿಲನ್ನು ಅರ್ಪಿಸಿ ವಿಶೇಷ ಪೂಜೆ ಸಲ್ಲಿಸಿದ್ದಾರೆ. ಚಿನ್ನದ ಪಟ್ಟಿ ಬಾಗಿಲು ಸಮರ್ಪಿಸುವುದಾಗಿ ಹರಕೆ ಹೊತ್ತು ಎರಡು ವರ್ಷಗಳ ಹಿಂದೆಯೇ ದೇವಾಲಯ ಆಡಳಿತ ಮಂಡಳಿಯಿಂದ ಅನುಮತಿ ಪಡೆದುಕೊಂಡಿದ್ದರು. ನವದುರ್ಗೆಯರ ಚಿನ್ನದ ಪಟ್ಟಿ ಬಾಗಿಲು ಸಂಪೂರ್ಣಗೊಂಡ ನಂತರ ದೇವಸ್ಥಾನದ ಗರ್ಭಗುಡಿ ಬಾಗಿಲಿಗೆ ಅರ್ಪಿಸಿದರು.

## ಚತುರ ಸಾರಿಗೆ

ವಾರ್ಷಿಕ ಒಂದು ಕೋಟಿ ರೂ. ವೆಚ್ಚಕ್ಕೆ ಕಡಿವಾಣ ಹಾಕುವ ಮೂಲಕ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ದೇಶದ ಗಮನ ಸೆಳೆದಿದೆ.

ಹೌದು... ಮೈಸೂರು ನಗರದಲ್ಲಿ ಚತುರ ಸಾರಿಗೆ ವ್ಯವಸ್ಥೆ (ಐಟಿಎಸ್) ಯನ್ನು ಜಾರಿಗೆ ತಂದ ಮೇಲೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ವರ್ಷಕ್ಕೆ 1 ಕೋಟಿ ರೂ. ಉಳಿತಾಯವಾಗುತ್ತಿದೆ.



# ಬೆಂಗಳೂರಿನ ನಿರ್ಮಾತೃ ಕೆಂಪೇಗೌಡರು

ಪ್ರೊ. ಬಿ. ನಾರಾಯಣಮ್ಮ





ಶ್ರೀ ಮರಿಮಲ್ಲಯ್ಯ

**ಕೆಂಪೇಗೌಡರು ಕಟ್ಟಿಸಿದ ದೇವಾಲಯಗಳು:**

ಕೆಂಪೇಗೌಡರು ದೇವಾಲಯಗಳನ್ನು ಕಟ್ಟಿಸುವುದರ ಕಡೆ ಹೆಚ್ಚಿನ ಗಮನ ಹರಿಸಿದರು. ಅವರು ಕಟ್ಟಿಸಿದ ದೇವಾಲಯಗಳು ಹೀಗಿವೆ:

1. ಗವಿಪುರದಲ್ಲಿ ಗಂಗಾಧರೇಶ್ವರ ದೇವಾಲಯ

2. ಕೋಟೆಯ ಉತ್ತರ ದ್ವಾರದ ಕಡೆ ದೊಡ್ಡ ಆಂಜನೇಯ, ವಿಘ್ನೇಶ್ವರ, ವೀರಭದ್ರ, ಬಸವಣ್ಣ ದೇವಾಲಯಗಳನ್ನು ಬಸವನಗುಡಿಯಲ್ಲಿ ಕಟ್ಟಿಸಿದರು. ಬಸವಣ್ಣ ದೇವಾಲಯದ ಹಿಂದೆ ವೃಷಭಾವತಿ ನದಿಯು ಹುಟ್ಟಿ ಪಶ್ಚಿಮಕ್ಕೆ ಹರಿಯುತ್ತದೆ.

3. ಅಲಸೂರಿನಲ್ಲಿ ಸೋಮೇಶ್ವರ ದೇವಾಲಯವನ್ನು ಕಟ್ಟಿಸಿ, ದೇವಾಲಯದ ಪೂಜಾಕಾರ್ಯಗಳು ನಿರಂತರವಾಗಿ ನಡೆಯಲು ಅನೇಕ ದಾನದತ್ತಿಗಳನ್ನು ಕೊಟ್ಟರು.

**ಕೆಂಪೇಗೌಡರು ಕಟ್ಟಿಸಿದ ಕೆರೆಗಳು:**

ಕೆಂಪೇಗೌಡರು ನೂತನ ನಗರದ ನೀರಿನ ವ್ಯವಸ್ಥೆಗಾಗಿ ಹಾಗೂ ವ್ಯವಸಾಯಕ್ಕಾಗಿ ಅನೇಕ ಕೆರೆಗಳನ್ನು ಕಟ್ಟಿಸಿದರು. ಅವರು ಕಟ್ಟಿಸಿದ ಕೆರೆಗಳು ಹೀಗಿವೆ:

1. ಈಗಿನ ಗವಿಪುರದಲ್ಲಿ ತಮ್ಮ ಕುಲದೇವತೆ ಕೆಂಪಾಂಬಿಕೆಯ ಹೆಸರಿನಲ್ಲಿ ಕೆಂಪಾಂಬುಧಿ ಕೆರೆ.

2. ಧರ್ಮಾಂಬುಧಿ ಕೆರೆ (ಈಗ ಬೆಂಗಳೂರು ನಗರ ಸಾರಿಗೆ ನಿಲ್ದಾಣವಾಗಿದೆ.)

3. ಸಂಪಂಗಿ ಕೆರೆ (ಕೆರೆ ಈಗ ಚಿಕ್ಕದಾಗಿದ್ದು, ಉಳಿದ ಪ್ರದೇಶವನ್ನು ಕಂಠೀರವ ಕ್ರೀಡಾಂಗಣ ಆಕ್ರಮಿಸಿದೆ.)

4. ಕಾರಂಜಿ ಕೆರೆ (ಕೆರೆ ಈಗ ಚಿಕ್ಕದಾಗಿದ್ದು, ಉಳಿದ ಪ್ರದೇಶವನ್ನು ಕಂಠೀರವಕ್ರೀಡಾಂಗಣ ಆಕ್ರಮಿಸಿದೆ.)

5. ಕೆಂಪಾಪುರದ ಅಗ್ರಹಾರದ ಕೆರೆ (ಈಗ ಮನೆಗಳನ್ನು ಕಟ್ಟಿಕೊಳ್ಳಲಾಗಿದೆ.)

6. ಸಿದ್ದಿ ಕಟ್ಟೆ (ಈಗಿನ ಬಿನ್ನಿ ಮಿಲ್ ಹಿಂಭಾಗದ ಪ್ರದೇಶ)

7. ಸಿದ್ದಾಪುರದ ಕೆರೆ (ಈಗಿನ ಲಾಲ್‌ಬಾಗ್ ಕೆರೆ)

8. ಅಲಸೂರಿನ ಕೆರೆ (ಈಗಲೂ ಹಾಗೆಯೇ ಇದೆ.)

9. ಗಂಧದ ಕೋಠಿ (ಈಗಲೂ ಇದೆ. ಸ್ಯಾಂಕಿ ಕೆರೆ ಎಂದು ಅದನ್ನು ಕರೆಯುತ್ತಾರೆ.)

ಇವುಗಳಲ್ಲದೆ ಬೆಂಗಳೂರಿನಲ್ಲಿ ಇನ್ನೂ ಅನೇಕ ಕೆರೆಗಳನ್ನು ಕಟ್ಟಿಸಿದರು.

**ಅನೇಕ ಪೇಟೆಗಳ ನಿರ್ಮಾಣ:** ಕೆಂಪೇಗೌಡರು ವೃತ್ತಿ ನಿರತರಿಗಾಗಿ ಸುಣ್ಣಕಲ್ಲು ಪೇಟೆ, ಬಳೇಪೇಟೆ, ಕುಂಬಾರಪೇಟೆ, ತಿಗಳರ ಪೇಟೆ, ಕುರುಬರ ಪೇಟೆ, ಸುಲ್ತಾನರ ಪೇಟೆ, ಅಕ್ಕಿಪೇಟೆ, ಅರಳೇಪೇಟೆ ಮುಂತಾದ ಅನೇಕ ಪೇಟೆಗಳನ್ನು ಸೃಷ್ಟಿಸಿದರು. ಅನೇಕ ಅಗ್ರಹಾರಗಳನ್ನು ಕಟ್ಟಿಸಿದರು. ತಮಿಳು, ತೆಲುಗು, ಮುಸಲ್ಮಾನರು ಮುಂತಾದವರು ಬಂದು ಇಲ್ಲಿ ನೆಲೆಸಲಾರಂಭಿಸಿದರು.

**ರಾಜ್ಯದ ವಿಸ್ತರಣೆ:** ಕೆಂಪೇಗೌಡರ ಏಳಿಗೆಯನ್ನು ನೋಡಿ ಸುತ್ತಮುತ್ತಲಿನ ಪಾಳೆಗಾರರು ಒಗ್ಗಟ್ಟಾಗಿ ಕೂಡಿಕೊಂಡು ಅವರ ವಿರುದ್ಧ ಯುದ್ಧವನ್ನು ಮಾಡಿದರು.

ಕೆಂಪೇಗೌಡರು ತಮ್ಮ ಮಗ ಇಮ್ಮಡಿ ಕೆಂಪೇಗೌಡನನ್ನು ನಗರ ನಿರ್ಮಾಣದಲ್ಲಿ ತೊಡಗಿಸಿ ತಾವು ಒಗ್ಗಟ್ಟಾಗಿ ಬಂದ ಪಾಳೆಗಾರರನ್ನು ಸೋಲಿಸಿದರು.

ಕೆಂಪೇಗೌಡರು ವೀರಣ್ಣ ಗೌಡರೊಡಗೂಡಿ ಮಾಗಡಿಯಿಂದ ಮುಂದೆ ಹೊರಟು ಶಿವಗಂಗೆ, ಹುತ್ತರಿ ದುರ್ಗ, ರಾಮಪುರ, ಹುಲಿಯೂರು ದುರ್ಗಗಳನ್ನು ಗೆದ್ದುಕೊಂಡು ಆ ಪಾಳೆಯಗಾರರನ್ನು ವಿಜಯನಗರದ ಸೇವೆಯಲ್ಲಿ ತೊಡಗಿಸಿದರು. ಈ ಪಾಳೆಯಗಾರರಿಂದ ಆಗ ವಿಜಯನಗರ ಸಾಮ್ರಾಜ್ಯವನ್ನು ಆಳುತ್ತಿದ್ದ ಅಚ್ಯುತರಾಯರಿಗೆ ತುಂಬಾ ತೊಂದರೆಯಾಗುತ್ತಿತ್ತು. ತೊಂದರೆಗಳನ್ನು ನಿವಾರಿಸಿದುದಕ್ಕಾಗಿ ಅಚ್ಯುತರಾಯರು ಸಂತೋಷದಿಂದ ಮೂವತ್ತು ಸಾವಿರ ಪಗೋಡ ವರಮಾನವಿದ್ದ ಅನೇಕ ಗ್ರಾಮಗಳನ್ನು ಕೆಂಪೇಗೌಡರಿಗೆ ನೀಡಿದರು. ನಗರ ನಿರ್ಮಾಣ ಸಂಪೂರ್ಣವಾಗುವವರೆಗೆ ಸಾಮ್ರಾಜ್ಯಕ್ಕೆ ಯಲಹಂಕದಿಂದ ಬರಬೇಕಾಗಿದ್ದ ಪೊಗದಿಯನ್ನು ಕೊಡಬೇಕಾಗಿಲ್ಲವೆಂದು ಸಾಮ್ರಾಟ್ ಅಚ್ಯುತರಾಯರು ಹೇಳಿದರು.

**ನೂತನ ನಗರದ ಕೋಟೆಯ ಬಾಗಿಲು:**

ಇಮ್ಮಡಿ ಕೆಂಪೇಗೌಡರು ಕೋಟೆಯ ನಿರ್ಮಾಣ ಮಾಡಿ ಬಹಳ ಭಾರವಾದ ಬಾಗಿಲನ್ನು ಇಡಿಸಿದರು. ಕೆಂಪೇಗೌಡರು ಹಾಗೂ ಮಗ ಇಮ್ಮಡಿ ಕೆಂಪೇಗೌಡರು ಪೂಜಿಸಿ ನಿಲ್ಲಿಸಿದ ಕೋಟೆ ಬಾಗಿಲು ಮಾರನೆಯ ದಿನ ನೆಲಕ್ಕೆ ಬಿದ್ದಿತ್ತು. ಚೆನ್ನಾಂಬೆ ಮತ್ತು ಸೊಸೆ ಲಕ್ಷ್ಮೀದೇವಿ ದೇವಾಲಯಗಳಲ್ಲಿ ಪೂಜೆ ಮಾಡಿಸಿ, ಕೋಟೆಯ ಬಳಿ ಬಂದರು. ಕೋಟೆ ಬಾಗಿಲು ನಿಲ್ಲಬೇಕಾದರೆ ಗರ್ಭಿಣಿ ಹೆಂಗಸನ್ನು ಬಲಿ ಕೊಡಬೇಕೆಂದು ಜನಗಳು ಮಾತನಾಡುತ್ತಿದ್ದರು ಹಾಗೂಪಂಡಿತರೂ ಸಹ ಅದನ್ನೇ ಹೇಳಿದರು. ಕೆಂಪೇಗೌಡರು ಇದನ್ನು ಕೇಳಿ ಮನನೊಂದು, 'ಬಾಗಿಲ ನಿಲ್ಲದಿದ್ದರೂ ಪರವಾಗಿಲ್ಲ, ಇಂತಹಅಮಾನುಷ ಕೃತ್ಯವನ್ನು ಮಾಡುವುದಿಲ್ಲ' ಎಂದು ವೀರಣ್ಣಗೌಡರ ನೇತೃತ್ವದಲ್ಲಿ ಕೋಟೆಯ ಬಳಿ ಯಾರೂ ಸುಳಿಯದಂತೆ ಕಾವಲು ಹಾಕಿಸಿದರು.

(ಮುಂದುವರಿಯುವುದು)





# ತುಂಬೆ ಹೂವಿನಿಂದ ತುಂಬಿ ತುಳುಕುವ ಆರೋಗ್ಯ

ಬಿಳಿ ಬಣ್ಣದ ತುಂಬೆ ಅತ್ಯಂತ ಶ್ರೇಷ್ಠವೆನಿಸಿದ್ದು ಔಷಧೀಯವಾಗಿ ಹೆಚ್ಚು ಬಳಕೆಯಲ್ಲಿದೆ.

1. ಆಗಾಗ ಕಾಡುವ ಜ್ವರದ ಸಮಸ್ಯೆಗೆ ತುಂಬೆ ಅತ್ಯುತ್ತಮ ಔಷಧಿ. ತುಂಬೆ ಗಿಡದ ರಸಕ್ಕೆ ಕರಿಮೆಣಸಿನ ಪುಡಿ ಅಥವಾ ಪೆಪ್ಪರ್ ಸೇರಿಸಿಕಷಾಯ ಮಾಡಿ ಕುಡಿಯೋದರಿಂದ ಜ್ವರದ ಸಮಸ್ಯೆ ನಿವಾರಣೆಯಾಗುತ್ತದೆ.

2. ತುಂಬೆಗಿಡ ಇದು ಒಂದು ಔಷಧೀಯ ಸಸ್ಯ. ಅಷ್ಟೇ ಅಲ್ಲ. ತಲೆನೋವಿನ ಸಂದರ್ಭದಲ್ಲಿ ತುಂಬೆಗಿಡದ ಕಾಂಡ ಮತ್ತು ಹೂವಿನ ಸಮೇತ ನೀರಿನಲ್ಲಿ ಚೆನ್ನಾಗಿ ಕುದಿಸಿ ಆ ನೀರಿನ ಹಬೆಯನ್ನು ತೆಗೆದುಕೊಳ್ಳುವುದು ಉತ್ತಮವಾದ ಮನೆಮದ್ದಾಗಿದೆ.

3. ನಿಮ್ಮ ಕಣ್ಣಿನ ಸುತ್ತಲೂ ಕಪ್ಪು ವರ್ತುಲದ ಸಮಸ್ಯೆ ಇದೆಯೇ? ಆಗಾಗ ಕಣ್ಣಿನ ಉರಿ ಕಾಣಿಸಿಕೊಳ್ಳೋದು, ಕಣ್ಣು ಕೆಂಪಗಾಗುವ ಸಮಸ್ಯೆ ಇದ್ದಲ್ಲಿ ತುಂಬೆಗಿಡದ ರಸಕ್ಕೆ ಸ್ವಲ್ಪ ತಣ್ಣನೆಯ ನೀರು ಇಲ್ಲವೇ ಹಾಲು ಸೇರಿಸಿ ಅದರಿಂದ ಮುಖ ತೊಳೆಯಿರಿ. ಕಣ್ಣಿಗೆ ತಂಪೆನಿಸುತ್ತದೆ ಮತ್ತು ಆರಾಮದಾಯಕ ಫೀಲ್ ನಿಮ್ಮದಾಗುತ್ತೆ.

4. ಒಂದಷ್ಟು ತುಂಬೆಗಿಡದ ಎಲೆ ಮತ್ತು ಕಾಂಡವನ್ನು ತೆಗೆದುಕೊಂಡು ಅದನ್ನು ನೀರಿನಲ್ಲಿ ಚೆನ್ನಾಗಿ ಕುದಿಸಿ ನಂತರ ಒಂದು ಬಟ್ಟೆಯನ್ನು ಅದರಲ್ಲಿ ಮುಳುಗಿಸಿ ತೆಗೆದು ಬಿಸಿ ಬಿಸಿ ಶಾಖವನ್ನು ನೋವಿರುವ ಜಾಗಕ್ಕೆ ಒತ್ತಿಕೊಳ್ಳಿ. ಊತ ನಿವಾರಣೆಯಲ್ಲಿ ಈ ಶಾಖ ನೀಡುವ ಪದ್ಧತಿ ಹಿಂದಿನಿಂದಲೂ ಇದೆ. ಅದರಲ್ಲೂ ತುಂಬೆಗಿಡದ ಶಾಖ ಯಾವುದೇ ರೀತಿಯ ಊತದ ನೋವು ನಿವಾರಣೆಯಲ್ಲಿ ಸಹಾಯ ಮಾಡಲಿದೆ.

5. ತುಂಬೆಗಿಡದ ಎಲೆಯ ರಸವನ್ನು ಹಾವು ಕಡಿದ ಜಾಗಕ್ಕೆ ಹಚ್ಚುವ ಪದ್ಧತಿ ಇದೆ. ಇದರಿಂದ ವಿಷ ರಕ್ತದಲ್ಲಿ ಪಸರಿಸದೇ ಸಾವು ಸಂಭವಿಸುವ ಸಾಧ್ಯತೆ ಕಡಿಮೆಯಾಗುತ್ತದೆ ಅಂತ ಹೇಳುತ್ತಾರೆ.

6. ಸೊಳ್ಳೆಯ ಸಮಸ್ಯೆ ಅದರಿಂದ ಬರುವ ರೋಗಗಳು ಮಹಾನಗರಿಗಳಲ್ಲಿ ಸರ್ವೇ ಸಾಮಾನ್ಯ. ಆದರೆ ಮನೆಯಲ್ಲಿ ಒಂದುತುಂಬೆಗಿಡ ನೆಟ್ಟು ನೋಡಿ. ಸೊಳ್ಳೆ ನಿಮ್ಮ ಮನೆಯಿಂದ ಕಾಲು ಕಿತ್ತಿರುತ್ತದೆ. ಸೊಳ್ಳೆಗಳು ಮಾತ್ರವಲ್ಲ, ಇತರೆ ಕೀಟಗಳ ಕಾಟ ಕೂಡ ನಿಮ್ಮ ಮನೆಯಲ್ಲಿ ಇರೋದಿಲ್ಲ.

7. ಯಾರಿಗೆ ತುರಿಕೆ, ಚರ್ಮದಲ್ಲಿ ಕಲೆಗಳು ಇತ್ಯಾದಿ ಚರ್ಮಸಂಬಂಧಿ ಕಾಯಿಲೆ ಇದೆಯೋ ಅಂತಹವರು ತುಂಬೆಗಿಡ ರಸವನ್ನು ಮೈಗೆ ಹಚ್ಚಿಕೊಳ್ಳೋದು ಇಲ್ಲವೇ ಸ್ನಾನದ ನೀರಿಗೆ ತುಂಬೆ ರಸವನ್ನು ಸೇರಿಸಿ ಪ್ರತಿನಿತ್ಯ ಸ್ನಾನ ಮಾಡೋದರಿಂದ ಸಮಸ್ಯೆಯಿಂದ ಮುಕ್ತಿ ಪಡೆದುಕೊಳ್ಳಬಹುದು.

*(ಪೂಜಾ ಗೌಡ, ಮೈಸೂರು)*

# ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ

**ಸುಜಾತ, ಚಿತ್ರದುರ್ಗ**

ಹೆಂಡತಿ ಪಕ್ಕದಲ್ಲೇ ಇದ್ದರೂ, ಪ್ರೇಯಸಿ ಎದುರಲ್ಲೇ ಇದ್ದರೂ ಫೇಸ್‌ಬುಕ್‌ನಲ್ಲಿ ಐ ಲವ್ ಯೂ ಎಂದು ಹೇಳುವುದೇಕೆ?

*ಫೇಸ್ ನೋಡುತ್ತಾ ಹೇಳಲು ಧೈರ್ಯವಿಲ್ಲದವರಿಗೆ ಫೇಸ್ ಬುಕ್ಕೇ ಗತಿ!*

**ಅಣ್ಣಾಜಪ್ಪ, ಹುಬ್ಬಳ್ಳಿ**

ಕಣ್ಣಿಗೆ ಕಾಣದ ದೇವರಿಗೆ ಕೈ ಮುಗಿಯುವುದರಲ್ಲಿ ಅರ್ಥವಿದೆಯೆ?

*ಇದೆ ಅಥವಾ ಇಲ್ಲ ಎಂಬುದು ನಿಮ್ಮ ನಂಬಿಕೆ ಹಾಗೂ ಸಂಸ್ಕಾರಗಳನ್ನು ಅವಲಂಬಿಸಿರುತ್ತದೆ.*

**ಪದ್ಮ ಎಂ.ಸಿ., ಮೂಡಿಗೆರೆ**

ಕುದುರೆಗೆ ಕೊಂಬಿದೆಯೇ?

*ನಿಮಗೇಕೆ ಅನುಮಾನ ಬಂತೋ ಗೊತ್ತಿಲ್ಲ. ಆದರೂ ಕಾಗುಣಿತ ಸರಿಯಾಗಿ ನೋಡಿ ಎರಡು ಕೊಂಬು ಇದೆ!*

**ಸ್ವಾಮಿ, ಬೆಂಗಳೂರು**

ಕನ್ನಡದ ತೇರನ್ನು ಎಳೆದೂ ಎಳೆದೂ ಸುಸ್ತಾದವರಿಗೆ ನೀವೇನಂತೀರಿ?

*ಈಗಲಾದರೂ ಕನ್ನಡಮ್ಮನಿಗೆ ಒಂದು ವಾಹನ ಕೊಡಿಸಿ ವೇಗವಾಗಿ ಮುಂದುವರೆಸಿ.*

**ವಿಜಯ, ಮಂಡ್ಯ**

ಸ್ವರ್ಗಕ್ಕೂ ನರಕಕ್ಕೂ ಎಷ್ಟು ಅಂತರವಿರಬಹುದು?

*ಭಯವೇ ನರಕ, ಅಭಯವೇ ಸ್ವರ್ಗ ಅಂದ ಮೇಲೆ ಅಂತರವಿರುವುದು ಒಂದು ಅಕ್ಷರದಷ್ಟು ಮಾತ್ರ!*

**ಪ್ರಕಾಶ, ಊಟಿ**

ಪ್ರೇಯಸಿಯೊಬ್ಬಳು ನನಗೆ ನಿಮ್ಮ ಮೇಲೆ ನನ್ನ ಪ್ರೀತಿ ಉಕ್ಕಿ ಹರಿಯುತ್ತಿದೆ ಎನ್ನುತ್ತಿದ್ದಾಳೆ. ಸಹಾಯ ಮಾಡುವಿರಾ?

*ಆಕೆಯ ಪ್ರೀತಿ ನಿಮ್ಮ ಮೇಲೆ ಹರಿದು ಉಕ್ಕಿ ಮುಂದಕ್ಕೆ ಹೋಗುತ್ತಿದೆ ಎಂದು ತಿಳಿಯಿರಿ. ಇನ್ನೇನು ಮಾಡಲು ಪ್ರಯತ್ನಿಸಬೇಡಿ.*

**ರಾಜೇಂದ್ರ, ಬೆಂಗಳೂರು**

ನನ್ನ ಗೆಳತಿ ನಾಳೆ ಭೇಟಿ ಆಗೋಣ ಅಂತಾಳೆ! ಇದು ಕೈ ಕೊಡುವ ಲಕ್ಷಣವೇ?

*ಅವಳು ನಿಮಗೆ ಕೈ ಕೊಡುವುದೇ ವಾಸಿ! ಏಕೆಂದರೆ ಅವಳ ಮಾತನ್ನು ಒಂದು ದಿವಸದ ಮಟ್ಟಿಗೂ ನಂಬುವುದಿಲ್ಲವಲ್ಲ.*

**ಮಂಜಪ್ಪ, ರಾಣೆಬೆನ್ನೂರು**

ಅಧಿಕಾರದ ಅಮಲಿಗೂ, ಕಳ್ಳಭಟ್ಟಿಯ ಅಮಲಿಗೂ ವ್ಯತ್ಯಾಸವೇನು?

*ಅಧಿಕಾರದ ಅಮಲಿನಲ್ಲಿರುವವ ಮೆಂಟಲ್ ಆಗ್ತಾನೆ, ಕಳ್ಳ ಭಟ್ಟಿಯ ಅಮಲಿನಲ್ಲಿರುವವ ಸೆಂಟಿಮೆಂಟಲ್ ಆಗುತ್ತಾನೆ.*

**ಉಮೇಶ್, ಹೈದ್ರಾಬಾದ್**

ಕೆಲವು ಹುಡುಗಿರಯು ಸುಮ್ಮ ಸುಮ್ಮನೆ ಉಗುರು ಕಚ್ಚಿಕೊಳ್ಳುವುದೇಕೆ?

*ಹೊಸ ಉಗುರು ಹಳೇ ಹಲ್ಲು ಕೂಡಿದರೆ ಬಲು ಸೊಗಸಂತೆ!*

**ಪ್ರೇಮ, ತಿರುಪತಿ**

ದೇವರು ಒಬ್ಬನೇ ಆದರೂ ಧರ್ಮಗಳು ಬಹಳವಾಗಿರುವುದೇಕೆ?

*ಊರು ಒಂದೇ ಆದರೂ ಮಾರ್ಗಗಳು ಅನೇಕವಿದ್ದಂತೆ!*



# ಯಮಲೋಕದಲ್ಲಿ ಪತ್ರಕರ್ತ



(ಹಿಂದಿನ ಸಂಚಿಕೆಯಿಂದ)

ಚಿತ್ರಗುಪ್ತ: ಕ್ಷಣಮಾತ್ರದಲ್ಲಿ ಆಸ್ಪತ್ರೆಗೆ ಬಂದರು. ಎಲ್ಲರೂ ಸುತ್ತು ನೋಡಿ ಏಕೆ ಹೀಗೆ ನಿಂತಿದ್ದೀರಿ? ಸರಿಯಿರಿ, ಸರಿಯಿರಿ ಎಂದರು. ಮಾತ್ರ ಕೇಳುತ್ತಿತ್ತು. ಮಂಜು ಕವಿದಂತೆ ಚಿತ್ರಗುಪ್ತರು ಕಾಣುತ್ತಿದ್ದರು.

ಯಮರಾಜ: ಯಮಲೋಕದಲ್ಲಿ ಯಮರಾಜನಿಲ್ಲದೆ ಬಿಕೋ ಎನ್ನುತ್ತಿತ್ತು. ಸಭೆ ನಡೆಯಲು ಚಿತ್ರಗುಪ್ತರು ಇರಬೇಕಾಗಿತ್ತು. ಇಬ್ಬರೂ ಇಲ್ಲದೆ ರಾಜಕೀಯ ಯಮಲೋಕದಲ್ಲಿ ಅಸ್ತವ್ಯಸ್ತವಾಗಿತ್ತು. ಯಾರೂ ನೀತಿ–ನಿಯಮಗಳನ್ನು ಪಾಲಿಸುತ್ತಿರಲಿಲ್ಲ. ಯಮರಾಜ ಹಾಸಿಗೆಯ ಮೇಲೆ ಮಲಗಿದ್ದ. ದೇವ ಸಖಿಯರನ್ನು ಕರೆದು ಔಷಧಿಯನ್ನು ಹಚ್ಚಿಸಿಕೊಳ್ಳುತ್ತಿದ್ದ.

ರಾಮಸಿಂಹಯ್ಯ: ಯಮಭಟರನ್ನು ಕರೆದು, ಲೋ ಮುಠ್ಠಾಳ್ರ, ನಿಮ್ಮ ಯಮರಾಜ ನಾರ್ದನ ಕಾಲಿನಿಂದ ಒದೆ ತಿಂದು ಬೆಡ್‌ರೂಂನಲ್ಲಿ ಬೆಡ್ ಸೆಟಪ್ ಅಂತ ಕಾಣುತ್ತೆ, ಹುಡ್ಗೀರ ಕೈಲಿ ಜಂಡೂಬಾಮ್ ಉಜ್ಜಿಸ್ಕೊಂಡು ಮೈಕೈ ಮಸಾಜ್ ಮಾಡ್ಕೋತಾ... ಅವ್ನ್ಗೆ ಅದೇ ಬೇಕಾಗಿತ್ತು. ಇಬ್ಬರೂ ಮೈ ಮರೀತಿದಾರೆ. ಹೋಗಿ ನೋಡ್ರೋ, ಮಂಕು ಸಾಂಬ್ರಾಣಿಗಳಾ.

ಯಮಭಟರು: ನಾಲ್ಕೈದು ಜನ ಗುಂಪಾಗಿ ಯಮರಾಜನ ಶಯ್ಯಾಗೃಹದತ್ತ ನಡೆದರು. ಪತ್ರಕರ್ತ ರಾಮಸಿಂಹಯ್ಯ ಹೇಳ್ದ ಹಾಗೆ ಸುಂದರ ತರುಣಿ ಕೈಲಿ ಧನ್ವಂತರಿ ಹಚ್ಚಿಸಿಕೊಳ್ಳುತ್ತಿದ್ದ.

ಯಮರಾಜ: ಆಹಾಹಾ, ನಿನ್ನ ಹಸ್ತದಿಂದ ನೋವೆಲ್ಲಾ ನಿವಾರಣೆಯಾಯಿತೆಂದು ಪಕ್ಕಕ್ಕೆ ತಿರುಗಿದ. ಆ ತರುಣಿ ಯಮರಾಜನ ಹೃದಯದ ಮೆಲೆ ತನ್ನ ಹೃದಯವನ್ನು ಒರಗಿಸಿದಳು. ಆ ಹೃದಯಗಳು ಸೋದರ–ಸೋದರಿಯರಂತೆ ಆಲಂಗಿಸಿತು.

ಯಮಭಟರು: ಆ ದೃಶ್ಯವನ್ನು ನೋಡಿ ಮತ್ತೆ ಪುಳಕಿತರಾದರು. ರಾಮಸಿಂಹಯ್ಯನವರು ಚಿತ್ರಗುಪ್ತರಿಗಿಂತ ಚುರುಕಿನ ಬುದ್ಧಿಯುಳ್ಳವರು. ಅವರು ಹೇಳಿರುವುದು ಸತ್ಯ ಸಂಗತಿಯಾಗಿದೆ. ನಮ್ಮ ಯಮರಾಜನನ್ನು ಬುಟ್ಟಿಗೆ ಹಾಕಿಕೊಂಡು ರಾಕ್ಷಸರ ತರಹ ರಾಜ್ಯ ಕಸಿದುಕೊಳ್ಳಲು ಬಂದಿದ್ದಾಳೆ. ಇವಳಿಗೆ ಸರಿಯಾಗಿ ಪಾಠ ಕಲಿಸಬೇಕು. ಪತ್ರಕರ್ತ ರಾಮಸಿಂಹಯ್ಯನ ಹತ್ತಿರ ಕಿವಿಗೆ ಸೀಸ ಕಾಯಿಸಿದ ಹಾಗೆ ನಡೆದುದನ್ನು ವಿವರಿಸಿ, ನಮ್ಮ ಯಮರಾಯನ ಹೃದಯದ ಮೇಲೆ ಆ ಚಿಣ್ಣಿಣಕಿ ಹೃದಯ ಒರಗಿಸಿದಳು ಎಂದು ಕಂಡದ್ದನ್ನು ಕಂಡಂತೆ ಹೇಳಿದರು.

ಪತ್ರಕರ್ತ: ರಾಮಸಿಂಹಯ್ಯ ಏ ಕಪಿ ಮುಂಡೇವಾ ಎಲ್ಲಿಯಾದರೂ ಬಾಯಿ ಬಡ್ಕೋಬ್ಯಾಡಿ ಎಂದರು. ಯಮಭಟರೇ ನಾನು ಹೊರಗೆ ಹೋಗಿ ಗಣೇಶ ಬೀಡಿ

ಸೇದ್ಕೊಂಡು ಬರ್ತೀನಿ. ಇಲ್ಲೇ ಇರಿ ತಿಳಿತಾ.

ಯಮಭಟರು: ನಾಲ್ಕೈದು ಜನ ಸ್ವರ್ಗ ಲೋಕಕ್ಕೆ ಹೋಗಿ ಇಂದ್ರನ ಕಿವಿಗೆ ಊದಿದರು. ಪ್ರಭು ನಮ್ಮ ಯಮರಾಜ ನಿಮ್ಹತ್ರ 'ರಂ' ಕುಡ್ದು ರಸ್ತೇಲಿ ಬಿದ್ದಿದ್ದ, ನಾರದರು ಒದ್ರು, ಯಮಪುರಿಯ ಬಾಗಿಲಲಿ ಬಿದ್ದ ಯಮ ನಮ್ಮ ಭಂಟರು ಪ್ರಭುಗಳನ್ನು ಬೆಡ್ ಮೇಲೆ ಮಲಗ್ಸಿದ್ರು.

ಇಂದ್ರ: ಆಮೇಲೆ ಏನಾಯಿತು?

ಯಮಭಟರು: ರೀ ಇರ್ರೀ, ಯಾಕೆ ಆತ್ರ ಪಡ್ತೀರ.

ಇಂದ್ರ: ಮತ್ತೇನಯ್ಯ ಬೇಗ ಹೇಳ್ಬಾರ್ದೆ.

ಯಮಭಟರು: ಏ ಇರೋ ನಾನ್ಹೇಳ್ತೀನಿ, ಇನ್ನೊಬ್ಬ ನಾನ್ಹೇಳ್ಬೇಕು. ಮತ್ತೊಬ್ಬ ನನ್ನಕ್ಕ ನಾನು ಹೇಳಿದ್ಮೇಲೆ ನೀನು ಹೇಳು.

*(ಮುಂದುವರೆಯುವುದು)*

---

## ಮಕ್ಕಳ ದಿನಾಚರಣೆ



ಈ ಫೋಟೋದಲ್ಲಿರುವ ಮಗು ಯಾರು, ಏನು ಎತ್ತ, ಏನಾಗಿದೆ ಎಂಬುದರ ಬಗ್ಗೆ ಊಹಿಸಿ ಹಾಗೂ ನಿಮ್ಮಲ್ಲಿ ಮಾಹಿತಿ ಲಭ್ಯವಿದ್ದರೆ ನಮ್ಮೊಂದಿಗೆ ಹಂಚಿಕೊಳ್ಳಿ. ಈ ಫೋಟೋವನ್ನು ಮಕ್ಕಳ ದಿನಾಚರಣೆ ಪ್ರಯುಕ್ತ ಪ್ರಕಟಿಸಿ ಕುಟುಂಬದವರಿಗೆಲ್ಲ ಆಶ್ಚರ್ಯವು ಹಾಗೂ ಸಂತೋಷವನ್ನುಂಟು ಮಾಡಲಿದೆ ಎಂದು ಭಾವಿಸಿ ಮ.ವಿ. ಬಳಗ ಮಗುವಿಗೆ ಶುಭವನ್ನು ಕೋರಿದೆ.

### Wonder But True

'Cry' and 'Try' have only letter difference in spelling. But a lot in meaning. 'Cry' collapses our confidence and 'Try' builds out confidence.

### ಕಡ್ಡಾಯ

ಹೆಲ್ಮೆಟ್ ಕಡ್ಡಾಯ ಮಾಡಿದರೆ ತಲೆ ಉಳಿಯುತ್ತದೆ!
ಮತದಾನ ಕಡ್ಡಾಯ ಮಾಡಿದರೆ ದೇಶ ಉಳಿಯುತ್ತದೆ!

9



# ಬಿಲ್ವ ಮಹಾತ್ಮೆ

ಬಿಲ್ವಪತ್ರೆ ಹಣ್ಣಿನ ತಿರುಳು ಆಮಶಂಕೆ ಮತ್ತು ಅತಿಬೇದಿಗೆ ದಿವ್ಯೌಷಧವೆಂದು ಹೇಲಾಗಿದೆ. ಬಿಲ್ವಪತ್ರೆ ಕಾಯಿ ಬಲಿತು ಹಣ್ಣಾದ ಮೇಲೆ ಉಪಾಯವಾಗಿ ಅದರ ತಿರುಳನ್ನು ತೆಗೆದು ಅದನ್ನು ಬುರುಡೆಯನ್ನಾಗಿ ಮಾಡಿ ಅದರಲ್ಲಿ ನಶ್ಯದ ಪುಡಿಯನ್ನು ತುಂಬಿ ಉಪಯೋಗಿಸುತ್ತಿದ್ದುದುಂಟು. ಆದರೆ ಆಧುನಿಕ ಸಮಾಜದಲ್ಲಿ ಅದಕ್ಕಿಂತ ಉತ್ತಮವಾದ ಡಬ್ಬಿಗಳು ಕಡಿಮೆ ಬೆಲೆಗೆ ದೊರಕುವುದರಿಂದ ಅವು ಈಗ ಇಲ್ಲವಾಗಿವೆ. ಬಿಲ್ವವೃಕ್ಷವನ್ನು ಕಡಿದಾಗ ಕಟುವಾದ ಸುವಾಸನೆ ಹೊರಬರುತ್ತದೆಂದು ಹೇಳುತ್ತಾರೆ. ಬಿಲ್ವವೃಕ್ಷದ ಹಣ್ಣು ಬಹಳ ರುಚಿಯಾಗಿರುತ್ತದೆ ಮತ್ತು ಸುವಾಸನೆಯುಳ್ಳದ್ದಾಗಿರುತ್ತದೆ. ಬಿಲ್ವಪತ್ರೆಯ ಕಾಯಿ ಬೇಲದಕಾಯಿಯಂತೆ ನುಣುಪಾಗಿದ್ದು ಬಲಿತಾಗ ಹಳದಿಯ ಬಣ್ಣದ್ದಾಗುತ್ತದೆ. ಇದರ ತೊಗಟೆ ಅಥವಾ ಹೊರಮೈ ಒರಟಾಗಿದ್ದು ಕಠಿಣವಾಗಿರುತ್ತದೆ. ಇದನ್ನು ಹಳದಿ ಬಣ್ಣದ ತಯಾರಿಕೆಯಲ್ಲಿ ಉಪಯೋಗಿಸುತ್ತಾರೆ.

ಬಿಲ್ವವೃಕ್ಷದ ಹಣ್ಣಿನ ತಿರುಳು ಹಳ ಹಿಂದಿನ ಕಾಲದಿಂದಲೂ ಅತಿಸಾರ, ಅತಿಭೇದಿಗಳಿಗೆ ಔಷಧಿಯಾಗಿ ಉಪಯೋಗಿಸಲಾಗುತ್ತಿದೆ. ಅದರ ತಿರುಳು ಮಲಬಂಧ ಪರಿಹಾರಕ ಹಾಗೂ ಸುಖವಿರೋಚಕ ಗುಣಗಳನ್ನು ಹೊಂದಿದ್ದು ಮಲಬದ್ಧತೆಯನ್ನು ಗುಣಪಡಿಸುವ ಒಳ್ಳೆಯ ಔಷಧಿ ಎಂಬುದು ಅನುಭವಕ್ಕೆ ಬಂದಿದೆ. ಇತ್ತೀಚೆಗೆ ಇದು ಆಮಶಂಕೆಯಂತಹ ರೋಗಗಳಿಗೆ ಒಳ್ಳೆಯ ಔಷಧವೆಂದು ಪರಿಗಣಿಸಲ್ಪಟ್ಟಿದೆ. ಬಿಲ್ವವೃಕ್ಷದ ಕಾಯಿ ಬಲಿತು ಹಣ್ಣಾಗುವ ಮೊದಲೇ ಅದನ್ನು ಒಣಗಿಸಿ ಅದರ ಕಷಾಯವನ್ನು ಮಾಡಿ ಕುಡಿಸಿದರೆ ಅತಿಸಾರ, ಅತಿಭೇದಿ ಮತ್ತು ಆಮಶಂಕೆ ರೋಗಗಳು ಗುಣವಾಗುತ್ತವೆ ಎಂದು ಹೇಳಲಾಗಿದೆ. ಹಣ್ಣಾದ ಮೇಲೆ ಅದರ ತಿರುಳನ್ನು ಹುಣಿಸೇ ಹಣ್ಣಿನ ರಸದಲ್ಲಿ ಸೇವಿಸಿದರೆ ಕುಡಿಯಲು ಒಳ್ಳೆಯ ತಂಪಾದ ಪಾನೀಯವಾಗುತ್ತದೆ. ತಿರುಳಿನಲ್ಲಿರುವ ಬೀಜದ ಸುತ್ತಲೂ ಇರುವ ಒಂದು ವಿಧವಾದ ಕಂದುಬಣ್ಣ ಮಿಶ್ರಿತವಾದ ಅಂಟು ದ್ರವವನ್ನು ಗೋಂದಿನಂತೆ ಉಪಯೋಗಿಸಬಹುದು. ಬಿಲ್ವವೃಕ್ಷದ ಬೇರು ಎಲೆಗಳು ಮತ್ತು ಮರದ ತೊಗಟೆಯನ್ನು ಮಲಬಾರ್ ಪ್ರದೇಶದಲ್ಲಿ ಪದಾರ್ಥಗಳನ್ನು ತಂಪಾಗಿಡಲು ಉಪೋಗಿಸುತ್ತಾರೆಂದು ಹೇಳಲಾಗಿದೆ. ಇದರ ಬೇರಿನ ತೊಗಟೆಯನ್ನು ಕಷಾಯ ಮಾಡಿ ವಿಶೇಷವಾಗಿ ಎಡೆಬಿಡದೆ ಬರುವ ಜ್ವರ ನಿವಾರಣೆಗೆ ಕೊಡಲಾಗುತ್ತದೆ. ಬಿಲ್ವವೃಕ್ಷದ ಎಲೆಯನ್ನು ಪೋಸ್ಟೀಸ್ ಮಾಡಿ ಕಣ್ಣಿಗೆ ಕಟ್ಟಿದರೆ ಕಣ್ಣಿನ ಉರಿಯೂತ ಅಥವಾ ಕಣ್ಣಿನ ಬೇನೆಗೆ ಔಷಧಿಯಾಗುತ್ತದೆ. ಇದರ ಹೂಗಳಿಂದ ತೆಗೆದ ಸುಗಂಧ ದ್ರವ್ಯವನ್ನು ಪನ್ನೀರಿನಂತೆ ಅತಿಥಿಗಳ ಮೇಲೆ ಚಿಮುಕಿಸಲು ಉಪಯೋಗಿಸುತ್ತಾರೆ. ಹಣ್ಣಿನ ತಿರುಳನ್ನು ಗಾರೆಯೊಡನೆ ಸೇರಿಸಿ ಉಪಯೋಗಿಸುತ್ತಾರೆ.

ಪೆಷಾವರ್‌ನಲ್ಲಿ ಬಿಲ್ವವೃಕ್ಷದ ಹಣ್ಣುಗಳನ್ನು ಒಣಗಿಸಿ ಅದರ ತಿರುಳನ್ನು ತೆಗೆದು ಅದರ ಮೇಲೆ ಅಂದವಾದ ಚಿತ್ರಗಳನ್ನು ಕೊರೆದು ಅದರ ಬಾಯಿಗೆ ಒಂದು ದಂತದ ಬಿರಡೆಯನ್ನು ಹಾಕಿ ನಶ್ಯದ ಡಬ್ಬಿಗಳನ್ನು ತಯಾರಿಸಿ ಆಫ್ಘಾನಿಸ್ತಾನಕ್ಕೆ ಮಾರಾಟಕ್ಕೆ ಕಳುಹಿಸುತ್ತಾರೆ. ಅಲ್ಲಿ ಇವಕ್ಕೆ ಬೇಡಿಕೆ ಇದೆ ಎಂದು ಹೇಳಲಾಗಿದೆ. ಸ್ರೀ ಜಗದ್ಗುರು ವಿಶ್ವರಾಧ್ಯರು ಬಿಲ್ವವೃಕ್ಷದ ದಂಡವನ್ನು ಉಪಯೋಗಿಸುತ್ತಿದ್ದರು. ಬಿಲ್ವವೃಕ್ಷದ ಸಮಿತ್ತುಗಳನ್ನು ಹೋಮಕುಂಡದಲ್ಲಿ ಆಜ್ಯದೊಡನೆ ಆಹುತಿ ಕೊಡುವ ಪದ್ಧತಿ ಆಚರಣೆಯಲ್ಲಿದೆ. ಬಿಲ್ವವೃಕ್ಷದಂತೆ ಕಡಿದು ಮಾಡಿದ ಶಿವಲಿಂಗವು ಬಹುಶ್ರೇಷ್ಠವಾದುದೆಂದು ಶಿವಾಗಮಗಳಲ್ಲಿ ಹೇಳಲಾಗಿದೆ. ಮುಕ್ಕಣ್ಣನಾದ ಶಿವನಿಗೂ ಬಿಲ್ವದ ಮೂರುದಳದ ಎಲೆಗೂ ಉಪಮೆ ಹೇಳುತ್ತಾರೆ. *(ಮುಂದುವರೆಯುವುದು)*

*ಸಂಗ್ರಹ: ಎಸ್.ಜೆ. ಕುಮಾರಾರಾಧ್ಯ, ಮೈಸೂರು*

ನವೆಂಬರ್ 2017 ತಿಂಗಳಲ್ಲಿ ಈ ಕೆಳಕಂಡ ಮಹಿಳಾಮಣಿಗಳ ಹುಟ್ಟುಹಬ್ಬದ ಪ್ರಯುಕ್ತ ಚಾಮುಂಡೇಶ್ವರಿ ದೇವಿ ಆಯುರಾರೋಗ್ಯ ಐಶ್ವರ್ಯಗಳನ್ನು ಕರುಣಿಸಲಿ ಎಂದು ಮ.ವಿ. ಬಳಕ ಕೋರಿದೆ.

1. ಉಷಾ, ಬೆಂಗಳೂರು
2. ಕಲಾವತಿ, ಅರಸೀಕೆರೆ
3. ಕಲಾ, ಮಂಡ್ಯ
4. ಪ್ರಿಯಾ, ಹಾಸನ
5. ರಮ್ಯ, ಹೊಸಪೇಟೆ
6. ಯಶು, ಬೆಂಗಳೂರು
7. ಮಾಧುರಿ, ಚನ್ನಪಟ್ಟಣ
8. ಲೀಲಾ, ಬಳ್ಳಾರಿ
9. ಜಲಜ, ತಿಪಟೂರು
10. ದೀಪಾ, ಮಂಡ್ಯ
11. ಶಾಲಿನಿ, ನಂಜನಗೂಡು
12. ಸರಳ, ಶಿವಮೊಗ್ಗ
13. ಉಮಾ, ಕೋಲಾರ
14. ವಿನೋದ, ಮಂಗಳೂರು
15. ರೂಪ, ಮೈಸೂರು
16. ಕಸ್ತೂರಿ, ತುಮಕೂರು
17. ಚಿತ್ರ, ಕೋಲಾರ
18. ನೀಲ, ಬೇಲೂರು
19. ಭಾರತಿ, ತಿಪಟೂರು
20. ಮಾಲತಿ, ಮಂಡ್ಯ
21. ಇಂದು, ಧಾರವಾಡ
22. ಶಾಂತಿ, ಹಾಸನ
23. ರಾಧಿಕ, ಕನಕಪುರ
24. ಭಾಗ್ಯ, ಕೊಪ್ಪ
25. ಲತಾ, ಕಡೂರು
26. ಕಮಲ, ಬೀದರ
27. ಜಾನಕಿ, ರಾಯಚೂರು
28. ತುಳಸಿ, ಮೈಸೂರು
29. ಕನಕ, ಶಿವಮೊಗ್ಗ
30. ಶಿಲ್ಪ, ಮೈಸೂರು

**ಮಹಿಳಾ ವಿಶೇಷ ಬಳಗ, 2017-18**

| | |
|---|---|
| ಶ್ರೀಮತಿ ರುಕ್ಮಿಣಿ | ಅಧ್ಯಕ್ಷರು |
| ಶ್ರೀಮತಿ ದಿವ್ಯ ವಿನಯ್ | ಕಾರ್ಯದರ್ಶಿ |
| ಶ್ರೀಮತಿ ಸಾವಿತ್ರಿ ಎಂ.ಸಿ. | ಸದಸ್ಯರು |
| ಶ್ರೀಮತಿ ವೀಣಾ | ಸದಸ್ಯರು |
| ಶ್ರೀಮತಿ ವೀಣಾ ಟಿ.ಆರ್. | ಸದಸ್ಯರು |
| ಶ್ರೀಮತಿ ಭಗವತಿ | ಸದಸ್ಯರು |
| ಶ್ರೀಮತಿ ಜಯಲಕ್ಷ್ಮಿ | ಸದಸ್ಯರು |
| ಶ್ರೀಮತಿ ಮಂಜುಳಾ ರಮೇಶ್ | ಸದಸ್ಯರು |
| ಶ್ರೀಮತಿ ಮಮತಾ ಶಶಿಧರ್ | ಸದಸ್ಯರು |
| ಶ್ರೀಮತಿ ಎಂ.ಜಿ. ವತ್ಸಲಾ | ಸದಸ್ಯರು |
| ಶ್ರೀಮತಿ ನಿವೇದಿತಾ | ಸದಸ್ಯರು |
| ಶ್ರೀಮತಿ ನಂದಿನಿ ಕೆ.ಆರ್. | ಸದಸ್ಯರು |
| ಶ್ರೀಮತಿ ದಿವ್ಯ | ಸದಸ್ಯರು |
| ಶ್ರೀಮತಿ ರೂಪಾ | ಸದಸ್ಯರು |
| ಶ್ರೀಮತಿ ಮಾಲಾ | ಸದಸ್ಯರು |
| ಶ್ರೀ ಕುಮಾರಾರಾಧ್ಯ ಎಸ್.ಜಿ. | ಅಧ್ಯಕ್ಷರು |
| ಶ್ರೀ ದ್ವಾರಕಾನಾಥ್ ಜಿ. | ಕಾರ್ಯದರ್ಶಿ |
| ಶ್ರೀ ನಾಗಭೂಷಣ್ ಎನ್ | ಸದಸ್ಯರು |
| ಶ್ರೀ ಕಾಂತರಾಜು ಎಂ. | ಸದಸ್ಯರು |
| ಶ್ರೀ ವಿಷ್ಣು ಕೆ.ಟಿ. | ಸದಸ್ಯರು |
| ಶ್ರೀ ಅರುಣ್ ಕುಮಾರ್ | ಸದಸ್ಯರು |
| ಶ್ರೀ ಮುರಳೀಧರ ಶಾಸ್ತ ಎಂ.ಎಸ್ | ಸದಸ್ಯರು |
| ಶ್ರೀ ಸಂಜೀವಕುಮಾರ್ | ಸದಸ್ಯರು |
| ಶ್ರೀ ಪುರುಷೋತ್ತಮ್ ಎಂ. | ಸದಸ್ಯರು |
| ಶ್ರೀ ರವಿಕುಮಾರ್ ಪಿ. | ಸದಸ್ಯರು |
| ಶ್ರೀ ಜಯಕುಮಾರ್ | ಸದಸ್ಯರು |
| ಡಾ. ವಿಜಯಕುಮಾರ್ | ಸದಸ್ಯರು |
| ಶ್ರೀ ಮುರಳಿ | ಸದಸ್ಯರು |
| ಶ್ರೀ ವೀರಶೈವಮೂರ್ತಿ | ಸದಸ್ಯರು |
| ಶ್ರೀ ಶ್ರೀನಿವಾಸ್ | ಸದಸ್ಯರು |



# ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲೇ ಇದೆ

**ಕೃಪೆ: ಡಾ. ಕೆ. ರಾಮಚಂದ್ರ, ಮಂಡ್ಯ**

## ಮಧುಮೇಹಿಗಳ ಪಾದಗಳ ಸಂರಕ್ಷಣೆಗಾಗಿ 21 ಸೂತ್ರಗಳು

**ನಿಮ್ಮ ಪಾದರಕ್ಷೆಗಳಲ್ಲಿ ಯಾವುದೇ ವಸ್ತುವಿಲ್ಲದಂತೆ ನೋಡಿಕೊಳ್ಳಿ (ಉದಾ: ಮೊಳೆ, ಗಾಜಿನ ಚೂರು, ಇತ್ಯಾದಿ):** ಸಾಮಾನ್ಯವಾಗಿ ನಾವು ಪಾದರಕ್ಷೆಗಳನ್ನು ಬಿಟ್ಟು ಮತ್ತೆ ಧರಿಸಲು ಹೋದಾಗ ಅನೇಕ ಸಂದರ್ಭಗಳಲ್ಲಿ ಮಕ್ಕಳಿಂದ ಅಥವಾ ಆಕಸ್ಮಿಕವಾಗಿ ಪಾದರಕ್ಷೆಗಳ ಒಳಗೆ ಪಾದಗಳಿಗೆ ಹಾನಿ ಮಾಡುವ ವಸ್ತುಗಳು ಸೇರಿರಬಹುದು. ಮಕ್ಕಳು ಕೆಲವೊಮ್ಮೆ ಮೊಳೆ, ಪೆನ್ನು, ಗಾಜಿನಚೂರು, ಬಳೆಚೂರು, ಇತ್ಯಾದಿ ಚುಚ್ಚುವ ವಸ್ತುಗಳನ್ನು ಒಳಗಿಟ್ಟಿರಬಹುದು. ಆದುದರಿಂದ ಪಾದರಕ್ಷೆಗಳನ್ನು ಧರಿಸುವ ಮೊದಲು ಒಮ್ಮೆ ನಿಮ್ಮ ಪಾದರಕ್ಷೆಗಳು ಸುರಕ್ಷಿತವೇ? ಎಂಬುದನ್ನು ಮನದಟ್ಟು ಮಾಡಿಕೊಳ್ಳಿ.

**ಸವೆದುಹೋದ ಅಥವಾ ಕಿತ್ತುಹೋದ ಪಾದರಕ್ಷೆಗಳನ್ನು ಧರಿಸಬಾರದು:** ಸಾಮಾನ್ಯವಾಗಿ ಇಂತಹ ಪಾದರಕ್ಷೆಗಳನ್ನು ಧರಿಸಬೇಡಿ. ಕಾರ್ಮಿಕರು ಹಳ್ಳಿಯವರು ಪಾದರಕ್ಷೆ ಸವೆದು ನಾಲಿಗೆ ತರಹ ಆಗಿದ್ದರೂ ಕೆಲವೊಮ್ಮೆ ತೂತು ಬಿದ್ದಿದ್ದರೂ ಅದನ್ನೇ ಉಪಯೋಗಿಸುತ್ತಿರುತ್ತಾರೆ. ಇದರಿಂದ ಪಾದಗಳಿಗೆ ಹಾನಿಯಾಗಿ ಹೆಚ್ಚು ಅನಾಹುತವಾಗುವ ಸಂಭವ ಬರಬಹುದು.

**ಬರಿಗಾಲಿನಲ್ಲಿ ಅಯ್ಯಪ್ಪಸ್ವಾಮಿ ದರ್ಶನಕ್ಕೆ ಹಾಗೂ ಸುಡುಬಿಸಿಲಿನಲ್ಲಿ ದೇವಸ್ಥಾನದ ಪ್ರಾಂಗಣ ಹಾಗೂ ಬೆಟ್ಟ ಹತ್ತುವುದು ಮಾಡಬೇಡಿ:** ಮಧುಮೇಹಿಗಳು ಅಯ್ಯಪ್ಪ ದರ್ಶನದ ಸಮಯದಲ್ಲಿ ಬರಿಗಾಲಿನಲ್ಲಿ ಬೆಟ್ಟ ಹತ್ತಿ ಗಾಯಗಳನ್ನು ಮಾಡಿಕೊಂಡು ತಿಂಗಳಾನುಗಟ್ಟಲೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವುದು ಬಹಳ ಸಾಮಾನ್ಯವಾಗಿದೆ. ಅದೇ ರೀತಿ ಸುಡುತ್ತಿರುವ ನೆಲದಲ್ಲಿ ಬರಿಗಾಲಿನಲ್ಲಿ ನಡೆದು ಪಾದಗಳಲ್ಲಿ ಬೊಬ್ಬೆ ಬರಿಸಿಕೊಳ್ಳುವುದು ಸಾಮಾನ್ಯವಾಗಿ ಕಂಡುಬರುವ ದೃಶ್ಯ. ಅದೇ ರೀತಿ ಹರಕೆ ಹೊತ್ತುಕೊಂಡು ಬರಿಗಾಲಿನಲ್ಲಿ ಬೆಟ್ಟ ಸುತ್ತುವುದು, ಕೊಂಡ ಹಾಯುವುದು ಇತ್ಯಾದಿ ಅನೇಕ ಮಧುಮೇಹಿಗಳಲ್ಲಿ ಕಂಡುಬರುತ್ತದೆ. ದಯವಿಟ್ಟು ಯಾವುದೇ ಮಧುಮೇಹಿಗಳು ಈ ರೀತಿ ಭಗವಂತನ ದರ್ಶನಕ್ಕೆ ಹೋಗಿ ಪಾದಗಳಿಗೆ ತೊಂದರೆ ಮಾಡಿಕೊಳ್ಳಬಾರದು. ಅನೇಕ ಸಂದರ್ಭಗಳಲ್ಲಿ ಒಂದುಸ ಣ್ಣ ಗಾಯ ವ್ರಣವಾಗಿ ಗ್ಯಾಂಗ್ರೀನ್‌ಗೆ ತಿರುಗಿದರೆ ಪಾದಗಳನ್ನು ತೆಗೆಯುವ ಪ್ರಸಂಗ ಬರುತ್ತದೆ. ಆದುದರಿಂದ ಭಗವಂತನನ್ನು ಇದ್ದಲ್ಲೇ ಪೂಜಿಸಿ, ಪಾದಗಳನ್ನು ಉತ್ತಮವಾಗಿ ಸಂರಕ್ಷಿಸಿಕೊಳ್ಳುವುದು ಬಹಳ ಮುಖ್ಯ.

**ಸಣ್ಣ ಗಾಯವಾದರೂ ಪ್ರಾರಂಭದಲ್ಲೇ ನಿಮ್ಮ ವೈದ್ಯರ ಸಲಹೆ ಪಡೆಯಿರಿ:** ಪಾದಗಳಲ್ಲಿ ಯಾವುದೇ ಸಣ್ಣ ಗಾಯವಾದರೂ ನೀವೇ ಚಿಕಿತ್ಸೆ ಮಾಡಿಕೊಳ್ಳಬೇಡಿ. ನಿಮ್ಮ ವೈದ್ಯರ ಸಲಹೆ ಪಡೆದು ಅವರ ಸಲಹೆಯಂತೆ ಸೂಕ್ತ ಚಿಕಿತ್ಸೆ ಮಾಡಿಕೊಂಡು ಆದಷ್ಟು ಶೀಘ್ರ ಗಾಯ ಗುಣವಾಗುವಂತೆ ನೋಡಿಕೊಳ್ಳಿ.

# Human Computer Shakuntala Devi



Born on Nov. 4, 1939, Devi figured World Record for her outstanding abil books like 'Fun with Numbers', 'Astrol Puzzle You' and 'Mathablit'.

Hailing from a simple orthodox K Devi's father was a circus performer wl and cannon ball shows. He had rebelled ple priest.

Devi was also an astrologer and gave remedies purportedly based on date and time of birth.

It was while Devi was playing cards with her father at the tender age of three that he found his daughter's c alculation abilities. It turned out that she beat him no by deceiving but memorizing the cards.

At the age of six, she demonstrated her calculation skills in her first maor public performance at the University of Mysore and two years later, she again proved herself successful as a child prodigy at Annamalai University.

However, despite apprehensions in some quarters, Devi did not lose her calculating ability when she turned adult like other prodigies such as Truman Henry Stafford.

A household name in India, Devi cast a spell adding a 16-digit number with another one and multiplying the result with an equal array of numbers almost instantenously, finding the cube root of the resultant and pops up with an answer in just about the time taken for a wink.

Devi, who has no formal education and who simply picked up reading and writing, had the ingenious ability to tell the day of the week of any given date in the last century in a jiffy.

"God's gift, a divine quality" is how Devi had once felt of her unique distinction that began showing visibility since the age of three. She has been quoted as saying that none in her family showed any signs of the same head for figures. "Not even remotely, al-



though my dad was a stage magician."

Rated as one in 58 million for her stupendous mathematical feats by one of the fastest super computers ever invented, the Univac-1108, Devi believed in using grey cells to silicon chips.

In 1977, Devi extracted the 23rd root of a 201-digit number mentally. In the same year in Dallas, she competed with a computer to see who gives the cube root of 18838517 faster and she won.

On June 18, 1980 she demonstrated the multiplication of two 13-digit numbers 7, 686, 369, 774, 870x2, 465, 099, 745, 799 pickd at random by the computer department of Imperial College, London. She answered the question in 28 seconds flat. This event is mention ed in the 1995 Guinness Book of Records.

"Why do children dread mathematics?", she was asked once. "Because of the wrong approach. Because it is looked as a subject," pat came her reply.

"Mathematics is life, you have maths in everything, right from time to your date of birth to the food you eat and the air you braethe" she states. The right age to train children in mathematics is six, says Shakunthala, who sparkled at three.

## Welcome to the 21st Century

| | |
|---|---|
| Phones | Wireless |
| Cooking | Fireless |
| Cars | Keyless |
| Food | Fatless |
| Tyres | Tubeless |
| Dress | Sleeveless |
| Youth | Jobless |
| Leaders | Shameless |
| Relationship | Meaningless |
| Attitude | Careless |
| Feelings | Heartless |
| Education | Valueless |

## DETAILS OF SUBSCRIPTION

*(Includes Postage, Web and Special Issues)*

**Kind Attn. to the Donors/Subscribers**

Mahila Vishesha Balaga requesting you to all those who are interested to donate or subscribe please contact and encourage to run the magazine smoothly. Please pass it on this message to your friends and others.

| | | |
|---|---|---|
| 2 Years Subscription | - | Rs. 301/- |
| 5 Years Subscription | - | Rs. 751/- |
| Life Membership | - | Rs. 3,001/- |
| Patron | - | Rs. 10,001/- |
| Special Patron | - | Rs. 25,001/- |
| Donor | - | Rs. 1,501/- and above |

Bank Account Details
State Bank of India
Vijay Nagar 2nd Stage Branch, Mysore - 17
Current A/c - Mahila Vishesha
C.A. No. 64183295918
IFSC SBIN0040646
E-mail: mahilavishesha@yahoo.com
mahilavishesha15@gmail.com
Web: www.mahilavishesha.in

Post Office Account
Yadavagiri Post Office, Mysore
S.B. A/c Venkata Subbarao H.V.
No. 30098204565

Address
Mahila Vishesha Kannada Monthly Magazine
No. 1, Seethavilasa Choultry, Narayanashastry Road
Mysore 570 024.
Ph: 88803-34444, 93797-77793, 92435-84444

**ವಚನ**

ಒಳ್ಳಿದರ ಒಡನಾಡಿ, ಕಳ್ಳನೊಳ್ಳಿದನಕ್ಕು
ಒಳ್ಳಿದನು ಕಳ್ಳರೊಡನಾಡಿ ಅವ ಶುದ್ಧ
ಕಳ್ಳ ತಾನಕ್ಕು, ಸರ್ವಜ್ಞ

ಸಜ್ಜನರ ಸಂಗದಲ್ಲಿ ಕಳ್ಳ ಬಂದು ಸೇರಿದರೆ, ಅವರ ಸತ್ಸಂಗದ ಫಲವಾಗಿ ಅವನೂ ಸಹ ಸಜ್ಜನನೇ ಆಗುವನು. ಆದರೆ ಸಜ್ಜನನಾದವನು ಕಳ್ಳರ ಸಂಗದಲ್ಲಿ ಬೆರೆತರೆ, ತನ್ನ ಸಜ್ಜನತೆಯನ್ನು ತೊರೆದು, ತಾನು ಕಳ್ಳನೇ ಆಗಿಬಿಡವನು.



RNI No. KARKAN/2015/71642
KA/SK/MYS/1091/2017-2019

ನಾಡಿನ ಜನತೆಗೆ ಕನ್ನಡ ರಾಜ್ಯೋತ್ಸವದ ಶುಭಾಶಯಗಳು

ಓರಿಯೋಲ್ಸ್ ವೈಜ್ಞಾನಿಕ ಯೋಗ ಮತ್ತು ಪ್ರಕೃತಿ ಸಂಶೋಧನಾ ಕೇಂದ್ರ

ಉಚಿತ ಔಷಧಿರಹಿತ ಚಿಕಿತ್ಸೆ

ಕೆಲವು ಕಾಯಿಲೆಗಳನ್ನು ನಿಯಂತ್ರಿಸಲು ಯೋಗ ಮತ್ತು ನಿಸರ್ಗ ಚಿಕಿತ್ಸೆಗಳು ಅತ್ಯುತ್ತಮವೆಂದು ಸಾಬೀತಾಗಿದೆ.

ಔಷಧಿ ಮಾತ್ರೆಗಳಿಲ್ಲದೆ ರೋಗ ನಿಯಂತ್ರಿಸೋಣ.

ನಂಬಲಾರಿರಿ, ಆದರೂ ನಂಬಲೇಬೇಕು. ನಿಮ್ಮ ಆಹಾರವೇ ನಿಮ್ಮ ಔಷಧ.

For Product and Free Consultation, Contact:
**Dr. Vijaya Kumar, D.R.**
**Oriolus Scientific Yoga and Naturopathy Centre**
CH-52, 7th Main, 5th Cross, Saraswathipuram,
Mysore.
Mob.: 99645-00668

Edited, Published and Owned by **H.V. Venkatasubbarao**, No. 1021, 14th Cross, 2nd Stage, Hebbal, Mysore-570 017 and Printed by B.C. Meera and Printed at Annapoorna Offset Printer, No. 511, 14th Main, Saraswathipuram, Mysore 570 009. Published at No. 1021, 14th Cross, 2nd Stage, Hebbal, Mysore-570 017. E-mail: mahilavishesha@yahoo.com Web: www.mahilavishesha.in Editor: **H.V. Venkatasubbarao** Mob.: 88803-34444, RNI No. KARKAN/2015/71642

ತೆರೆದ ಅಂಚೆ

To

ಇಂದ:
ಮಹಿಳಾ ವಿಶೇಷ, ನಂ. 1, ಸೀತಾವಿಳಾಸ ಛತ್ರ,
ಎನ್.ಎಸ್. ರಸ್ತೆ, ಮೈಸೂರು-24